ನಮಾಝ್

[ಶಾಫಿಈ ಕ್ರಮ]

ಎಂ. ಸಾದುಲ್ಲಾ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ನಮಾಝ್‌ನ ವಿಧಾನ ಮತ್ತಿತರ ಅಗತ್ಯದ ವಿಷಯಗಳನ್ನೊಳಗೊಂಡಿರುವ ಗ್ರಂಥಗಳು ಇತರ ಭಾಷೆಗಳಲ್ಲಿ ಹಲವಾರು ಲಭ್ಯವಿದೆಯಾದರೂ ಕನ್ನಡ ಭಾಷೆಯಲ್ಲಿ ಅತೀ ವಿರಳ. ಲಭ್ಯವಿರುವ ಪುಸ್ತಕಗಳು ಹನಫೀ ಕರ್ಮಶಾಸ್ತ್ರಕ್ಕೆ ಅಥವಾ ಅಹ್ಲೆ ಹದೀಸ್ ಕರ್ಮಶಾಸ್ತ್ರಕ್ಕೆ ಸಂಬಂಧಿಸಿವೆಯೇ ಹೊರತು ಶಾಫಿಈ ಕರ್ಮಶಾಸ್ತ್ರದ ಕ್ರಮದಂತೆ ಕಲಿಸುವ ಪುಸ್ತಕಗಳು ಲಭ್ಯವಿಲ್ಲ. ಕರಾವಳಿ ಕರ್ನಾಟಕದಲ್ಲಿ ಹೆಚ್ಚಾಗಿ ಶಾಫಿಈ ಕರ್ಮಶಾಸ್ತ್ರವನ್ನು ಪಾಲಿಸುವವರೇ ಇದ್ದಾರೆ.

ಈ ಅಗತ್ಯವನ್ನು ಮನಗಂಡು ಈ ಪುಸ್ತಕವನ್ನು ರಚಿಸಲಾಗಿದೆ. ಇದರಲ್ಲಿ ನಮಾಝ್‌ನ ಅತ್ಯಗತ್ಯ ವಿಷಯಗಳನ್ನೂ ನಮಾಝ್ ಮಾಡುವ ಕ್ರಮವನ್ನೂ ಕಲಿಸಲು ಪ್ರಯತ್ನಿಸಲಾಗಿದೆ. ಈ ಪುಸ್ತಕವು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಓದು ಬರಹ ಕಡಿಮೆ ಬಲ್ಲ ಇತರರಿಗೂ ಉಪಯುಕ್ತವಾಗಿದೆ. ಇದರಲ್ಲಿ ನಮಾಝ್‌ನ ಭಂಗಿಯ ರೇಖಾ ಚಿತ್ರಗಳನ್ನೂ ಅಳವಡಿಸಲಾಗಿದ್ದು, ನಮಾಝ್‌ನ ಕ್ರಮವನ್ನು ಸ್ವತಂತ್ರವಾಗಿ ಕಲಿತುಕೊಳ್ಳಲು ಇದು ಸಹಕಾರಿಯಾಗಿದೆ. ಅದೇ ರೀತಿಯಲ್ಲಿ ನಮಾಝ್‌ನಲ್ಲಿ ಹೇಳಬೇಕಾದ ತಸ್ಬೀಹ್‌ಗಳು, ಅತ್ತಹಿಯ್ಯಾತ್, ಸಲಾತ್ ಮತ್ತು ದುಆಗಳಲ್ಲದೆ ಕುನೂತ್, ಮಯ್ಯಿತ್ ನಮಾಝ್‌ನಲ್ಲಿ ಪಠಿಸಬೇಕಾದ ದುಆಗಳನ್ನೂ ಕೆಲವು ಅಧ್ಯಾಯಗಳನ್ನೂ ಅರಬಿ ಮೂಲದ ಜೊತೆಗೆ ಕನ್ನಡದಲ್ಲೂ ಲಿಪ್ಯಂತರ ಗೊಳಿಸಲಾಗಿದೆ ಮತ್ತು ಅವುಗಳ ಅರ್ಥವನ್ನೂ ಕೊಡಲಾಗಿದೆ.

ಆದರೆ ಹಲವು ಅರಬಿ ಅಕ್ಷರಗಳನ್ನು ಅದರ ಉಚ್ಚಾರ ಸಹಿತ ಕನ್ನಡದಲ್ಲಿ ಲಿಪ್ಯಂತರಗೊಳಿಸಲು ಸಾಧ್ಯವಿಲ್ಲ. ಆದುದರಿಂದ ಅಂತಹ ಶಬ್ದಗಳ ಸರಿಯಾದ ಉಚ್ಚಾರವನ್ನು ಅರಬಿ ಬಲ್ಲವರಿಂದ ಕೇಳಿ ತಿಳಿದು ಪಠಿಸಬೇಕಾದುದು ಅಗತ್ಯ. ಈ ವಿಷಯದಲ್ಲಿ ಯಾವುದೇ ಸಂಕೋಚ ಸರಿಯಲ್ಲ. ಈ ಕೃತಿಯು ಜನಸಾಮಾನ್ಯರ ಮಟ್ಟಿಗೆ ಉಪಯುಕ್ತವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ನಮಾಝ್‌ನ ಶರತ್ತುಗಳು

ನಮಾಝ್ ಸಿಂಧುವಾಗಬೇಕಾದರೆ ಈ ಕೆಳಗಿನ ನಿಬಂಧನೆಗಳನ್ನು ಪಾಲಿಸಬೇಕು:

1. ಶರೀರವು ಶುದ್ಧಾವಸ್ಥೆಯಲ್ಲಿರಬೇಕು. ಅಶುದ್ಧಾವಸ್ಥೆಯಿಂದ ಮುಕ್ತವಾಗಿರಬೇಕು. ಅಶುದ್ಧಾವಸ್ಥೆಗೆ 'ಹದಸ್' ಎಂದು ಹೆಸರು.

2. ಶರೀರ, ಉಡುಪು ಮತ್ತು ನಮಾಝ್ ಮಾಡುವ ಸ್ಥಳ – ಇವು ಮಾಲಿನ್ಯ ರಹಿತವಾಗಿರಬೇಕು. ಮಾಲಿನ್ಯಾವಸ್ಥೆಗೆ 'ನಜಸ್' ಎಂದು ಹೆಸರು.

3. 'ಔರತ್' ಮರೆಸಬೇಕು. ದೇಹದಲ್ಲಿ ಕಡ್ಡಾಯವಾಗಿ ಮರೆಸಬೇಕಾದ ಭಾಗಕ್ಕೆ 'ಔರತ್' ಎಂದು ಹೆಸರು.

4. ನಮಾಝ್‌ನ ಸಮಯವಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

5. ಕಿಬ್ಲಾಭಿಮುಖವಾಗಿರಬೇಕು. ಪವಿತ್ರ ಕಅಬಾ ಇರುವ ದಿಕ್ಕಿಗೆ ಕಿಬ್ಲಾ ಎಂದು ಹೆಸರು.

ವುಝೂವಿನ ನಿಯಮಗಳು

ಫರ್ಝ್‌ಗಳು

ವುಝೂ ಅಥವಾ ಅಂಗಸ್ನಾನ ಸಿಂಧುವಾಗಬೇಕಾದರೆ ಈ ಕೆಳಗಿನ ವಿಷಯಗಳನ್ನು ಪಾಲಿಸಬೇಕಾದುದು ಕಡ್ಡಾಯ:

1. ನಿಯ್ಯತ್ ಅರ್ಥಾತ್ 'ಸಂಕಲ್ಪ' ಮಾಡಬೇಕು.
2. ಮುಖ ತೊಳೆಯಬೇಕು.
3. ಎರಡೂ ಕೈಗಳನ್ನು ಮೊಣಗಂಟುಗಳ ವರೆಗೆ ತೊಳೆಯಬೇಕು.
4. ತಲೆ ಸವರಬೇಕು.
5. ಕಾಲುಗಳನ್ನು ಮಣಿಗಂಟು ವರೆಗೆ ತೊಳೆಯಬೇಕು.
6. ತರ್ತೀಬ್ – ಅಂದರೆ ಮೇಲಿನ ಕ್ರಿಯೆಗಳನ್ನು ಅನುಕ್ರಮವಾಗಿ ಮಾಡಬೇಕು.

ಸುನ್ನತ್‌ಗಳು

1. ಆರಂಭದಲ್ಲಿ 'ಬಿಸ್ಮಿಲ್ಲಾ' ಪಠಿಸುವುದು.

2. ಎರಡೂ ಕೈಗಳನ್ನು ಮಣಿಗಂಟಿನ ವರೆಗೆ ತೊಳೆಯುವುದು.

3. ಹಲ್ಲುಜ್ಜುವುದು.

4. ಬಾಯಿ ಮುಕ್ಕಳಿಸುವುದು.

5. ಮೂಗಿನೊಳಗೆ ನೀರು ಹಾಕಿ ತೊಳೆಯುವುದು.

6. ಗಡ್ಡಗಳೆಡೆ ಬೆರಳುಗಳನ್ನು ತೂರಿ ಬುಡದ ವರೆಗೆ ತೊಳೆಯುವುದು.

7. ಕೈ ಕಾಲುಗಳ ಬೆರಳುಗಳನ್ನು ಪೋಣಿಸಿ ತೊಳೆಯುವುದು.

8. ಎರಡೂ ಕಿವಿಗಳನ್ನು ಸವರುವುದು.

9. ಅಂಗಾಂಗಗಳನ್ನು ತಿಕ್ಕಿ ತೊಳೆಯುವುದು.

10. ಕಡ್ಡಾಯ ಪರಿಧಿಯನ್ನು ಮೀರಿ ಸ್ವಲ್ಪಂಶ ಹೆಚ್ಚು ತೊಳೆಯುವುದು.

11. ಬಲಕೈ ಮತ್ತು ಬಲಕಾಲುಗಳನ್ನು ಎಡಕೈ ಮತ್ತು ಎಡಕಾಲುಗಳಿಗಿಂತ ಮೊದಲು ತೊಳೆಯುವುದು.

12. ಎಲ್ಲ ಕ್ರಿಯೆಗಳನ್ನು ತಲಾ ಮೂರು ಸಲ ಮಾಡುವುದು.

13. ಒಂದರ ಹಿಂದೆ ಒಂದರಂತೆ ಎಡೆಬಿಡದೆ ತೊಳೆಯುವುದು.

14. ವುಝೂ ಮುಗಿದ ಕೂಡಲೇ ದುಆ ಪಠಿಸುವುದು.

ವುಝೂವಿನ ದುಆ ಹೀಗಿದೆ:

اَشْهَدُ اَنْ لَّآ اِلٰـهَ اِلَّا اللّٰهُ وَحْدَهُ لَا شَرِيْكَ لَهُ وَاَشْهَدُ اَنَّ مُحَمَّدًا عَبْدُهُ وَرَسُوْلُهُ اَللّٰهُمَّ اجْعَلْنِىْ مِنَ التَّوَّابِيْنَ وَاجْعَلْنِىْ مِنَ الْمُتَطَهِّرِيْنَ سُبْحَانَكَ اَللّٰهُمَّ وَبِحَمْدِكَ اَشْهَدُ اَنْ لَّا اِلٰهَ اِلَّا اَنْتَ، اَسْتَغْفِرُكَ وَاَتُوْبُ اِلَيْكَ

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹು ವರಸೂಲುಹು. ಅಲ್ಲಾಹುಮ್ಮಜ್‌ಅಲ್‌ನಿ ಮಿನತ್ತವ್ವಾಬೀನ ವಜ್‌ಅಲ್‌ನೀ ಮಿನಲ್ ಮುತತಹ್ಹಿರೀನ್. ಸುಬ್‌ಹಾನಕ ಅಲ್ಲಾಹುಮ್ಮ ವಬಿಹಮ್ದಿಕ ಅಶ್‌ಹದು ಅಲ್ಲಾಇಲಾಹ ಇಲ್ಲಾ ಅಂತ ಅಸ್ತಗ್‌ಫಿರುಕ ವ ಅತೂಬು ಇಲೈಕ."

(ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಏಕೈಕನೂ ಸಹಭಾಗಿಗಳಿಲ್ಲದವನೂ ಆಗಿದ್ದಾನೆಂದು ನಾನು ಸಾಕ್ಷ್ಯ ವಹಿಸುತ್ತೇನೆ ಮತ್ತು ಮುಹಮ್ಮದ್(ಸ)

ಅಲ್ಲಾಹನ ದಾಸರೂ, ಅವನ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಓ ಅಲ್ಲಾಹ್! ನನ್ನನ್ನು ಅತ್ಯಧಿಕ ಪಶ್ಚಾತ್ತಾಪಪಡುವವರಲ್ಲಿ ಮತ್ತು ಶುದ್ಧವಾಗುವವರಲ್ಲಿ ಸೇರಿಸು. ಓ ಅಲ್ಲಾಹ್! ನೀನು ಪರಮ ಪಾವನನು. ನಿನ್ನ ಸ್ತುತಿಸ್ತೋತ್ರಗಳೊಂದಿಗೆ ನಾನು ಸಾಕ್ಷ್ಯ ವಹಿಸುತ್ತೇನೆ. ನೀನಲ್ಲದೆ ಅನ್ಯ ಆರಾಧ್ಯರಿಲ್ಲ. ನಾನು ನಿನ್ನಲ್ಲಿ ಕ್ಷಮೆ ಯಾಚಿಸುತ್ತೇನೆ ಮತ್ತು ನಿನ್ನೆಡೆಗೇ ಪಶ್ಚಾತ್ತಾಪಪಟ್ಟು ಮರಳುತ್ತೇನೆ.)

ವುಝೂ ಭಂಗಗೊಳ್ಳುವ ಕಾರ್ಯಗಳು

1. ಗುಪ್ತಾಂಗಗಳಿಂದ ಏನಾದರೂ ಹೊರಬರುವುದು. ಉದಾ: ಮಲ–ಮೂತ್ರ, ರಕ್ತ, ವಾಯು, ವೀರ್ಯ ಅಥವಾ ಇನ್ನಾವುದೇ ವಸ್ತು.

2. ಮಲಗಿ ನಿದ್ರಿಸುವುದು. (ಕುಳಿತುಕೊಂಡು ತೂಕಡಿಸಿದರೆ ಅಥವಾ ನಿದ್ರಿಸಿದರೆ ವುಝೂ ಭಂಗವಾಗುವುದಿಲ್ಲ.)

3. ಪ್ರಜ್ಞಾಹೀನತೆ, ಅಮಲು ಅಥವಾ ಹುಚ್ಚು.

4. ಗುಪ್ತಾಂಗಗಳನ್ನು ಬರಿಗೈಯಿಂದ ಸ್ಪರ್ಶಿಸುವುದು.

5. ಸ್ತ್ರೀ–ಪುರುಷರ ದೇಹದ ಯಾವುದೇ ಭಾಗವು ಪರಸ್ಪರ ತಾಗುವುದು. ಆದರೆ ಮಹ್ರಮ್ (ವಿವಾಹ ನಿಷಿದ್ಧವಾಗಿರುವ) ಸ್ತ್ರೀಯರನ್ನು ಮುಟ್ಟುವುದರಿಂದ ವುಝೂ ಭಂಗವಾಗುವುದಿಲ್ಲ.

ಸ್ನಾನದ ನಿಯಮಗಳು

ಫರ್ಝ್‌ಗಳು

1. ನಿಯ್ಯತ್ (ಸಂಕಲ್ಪ).

2. ಸಂಪೂರ್ಣ ಶರೀರಕ್ಕೆ ನೀರು ಹಾಯಿಸುವುದು.

ಸುನ್ನತ್‌ಗಳು

1. ದೇಹದ ಮಾಲಿನ್ಯವನ್ನು ತೊಳೆಯುವುದು.

2. ಹಲ್ಲುಜ್ಜಿ ವುಝೂ ಮಾಡುವುದು.

3. ನೀರು ತಾಗಲಾರದೆಂಬ ಆಶಂಕೆಯಿರುವ ಸ್ಥಳಗಳನ್ನು ಚೆನ್ನಾಗಿ ತೊಳೆಯುವುದು. ಉದಾ: ಕಿವಿ, ಕಂಕುಳು, ಹೊಕ್ಕುಳು, ಕಣ್ಣ ಮೂಲೆ, ಕೂದಲು ಇತ್ಯಾದಿ.

4. ಶರೀರವನ್ನು ತಿಕ್ಕಿ ಉಜ್ಜುವುದು.

5. ಪ್ರತಿಯೊಂದು ಅಂಗವನ್ನು ಮೂರು ಸಲ ತೊಳೆಯುವುದು.

6. ನಿರಂತರ ಎಡೆಬಿಡದೆ ಮಾಡುವುದು.

7. ಸ್ನಾನ ಮುಗಿದ ನಂತರ ದುಆ ಪಠಿಸುವುದು. ಇಲ್ಲಿ ವುಝೂವಿನ ನಂತರದ ದುಆವನ್ನೇ ಪಠಿಸಬಹುದು.

ಸ್ನಾನ ಕಡ್ಡಾಯಗೊಳ್ಳುವುದು ಯಾವಾಗ?

1. ಸ್ತ್ರೀ ಅಥವಾ ಪುರುಷರ ವೀರ್ಯ ಸ್ಖಲನ. ಇದು ನಿದ್ರಾವಸ್ಥೆಯಲ್ಲಾದರೂ ಸರಿ, ಎಚ್ಚರದಲ್ಲಿದ್ದಾಗಲೂ ಸರಿ.

2. ಸ್ತ್ರೀ–ಪುರುಷರ ಲೈಂಗಿಕ ಸಂಪರ್ಕ. ಇದರಲ್ಲಿ ಸ್ಖಲನವಾಗದಿದ್ದರೂ ಸರಿ.

3. ಮುಟ್ಟು ಸ್ರಾವ ಮತ್ತು ಬಾಣಂತಿತನದ ನಂತರ.

ಜನಾಬತ್ ಅಥವಾ ಸ್ನಾನ ಕಡ್ಡಾಯವಾಗಿರುವ ಅವಸ್ಥೆಯಲ್ಲಿ ಪವಿತ್ರ ಕುರ್‌ಆನನ್ನು ಮುಟ್ಟುವುದು, ಪಠಿಸುವುದು ಮತ್ತು ಮಸೀದಿಯಲ್ಲಿ ಕುಳಿತುಕೊಳ್ಳುವುದು ನಿಷಿದ್ಧ. ಆದರೆ ಮಸೀದಿಯೊಳಗಿಂದ ಹಾದು ಹೋಗುವುದರಲ್ಲಿ ಅಭ್ಯಂತರವಿಲ್ಲ.

ತಯಮ್ಮುಮ್‌ನ ನಿಯಮಗಳು

ನಿಬಂಧನೆಗಳು

ವುಝೂ ಅಥವಾ ಸ್ನಾನದ ಬದಲು ಮಾಡುವ ಕ್ರಿಯೆಯೇ ತಯಮ್ಮುಮ್. ತಯಮ್ಮುಮ್ ಮಾಡಬೇಕಾದ ಪರಿಸ್ಥಿತಿ ಈ ಕೆಳಗಿನಂತಿವೆ–

1. ಪ್ರಯಾಣದಲ್ಲಿದ್ದು ನೀರು ಸಿಗದಾಗ.

2. ರೋಗ ಉಲ್ಬಣಿಸಬಹುದೆಂಬ ಭೀತಿಯಿದ್ದಾಗ.

3. ನೀರು ಉಪಯೋಗಿಸಿದರೆ ಅಪಾಯವಿದ್ದರೆ ಅಥವಾ ಶರೀರದ ಯಾವುದಾದರೂ ಅಂಗಕ್ಕೆ ಹಾನಿ ತಟ್ಟಬಹುದೆಂಬ ಭೀತಿಯಿದ್ದಾಗ.

4. ನೀರಿಗೆ ಹೋಗುವ ದಾರಿಯಲ್ಲಿ ವೈರಿ, ಬೆಂಕಿ ಅಥವಾ ಕ್ರೂರ ಮೃಗದ ಭೀತಿಯಿದ್ದಾಗ.

5. ಇದ್ದ ನೀರನ್ನು ಉಪಯೋಗಿಸಿದರೆ ಕುಡಿಯಲು ನೀರು ಸಿಗಲಾರದು ಎಂಬ ಆತಂಕೆಯಿದ್ದಾಗ.

ಫರ್ಝ್‌ಗಳು

1. ನಿಯ್ಯತ್ (ಸಂಕಲ್ಪ).

2. ಶುದ್ಧ ಮಣ್ಣಿಗೆ ಕೈಗಳನ್ನು ಹೊಡೆದು ಇಡೀ ಮುಖವನ್ನು ಸವರುವುದು.

3. ಎರಡೂ ಕೈಗಳನ್ನು ಇನ್ನೊಮ್ಮೆ ಮಣ್ಣಿಗೆ ಹೊಡೆದು ಮೊಣಗಂಟುಗಳ ವರೆಗೆ ಸವರುವುದು.

4. ತರ್ತೀಬ್ (ಒಂದರ ನಂತರ ಒಂದರಂತೆ ಕ್ರಮವಾಗಿ ನಿರ್ವಹಿಸುವುದು).

ಒಂದು ತಯಮ್ಮುಮ್‌ನಿಂದ ಒಂದೇ ಫರ್ಝ್ ನಮಾಝ್ ಮಾಡಬಹುದು. ಅದಕ್ಕಿಂತ ಹೆಚ್ಚು ಫರ್ಝ್ ಮಾಡುವಂತಿಲ್ಲ. ಆದರೆ ಸುನ್ನತ್ ಮತ್ತು ಜನಾಝಾ ನಮಾಝ್‌ಗಳನ್ನು ಎಷ್ಟು ಬೇಕಾದರೂ ಮಾಡಬಹುದು.

ವುಝೂ ಭಂಗಗೊಳ್ಳುವ ಕಾರ್ಯಗಳಿಂದ ತಯಮ್ಮುಮ್ ಕೂಡಾ ಭಂಗ ಗೊಳ್ಳುತ್ತವೆ. ಅದಲ್ಲದೆ ನೀರು ಸಿಕ್ಕಿದರೆ ಅಥವಾ ವುಝೂ ಮಾಡದೆ ಇರಲಿಕ್ಕಿರುವ ಕಾರಣಗಳು ಉಳಿಯದಿದ್ದರೆ ತಯಮ್ಮುಮ್ ಭಂಗಗೊಳ್ಳುತ್ತದೆ. ಒಬ್ಬನು ತಯಮ್ಮುಮ್ ಮಾಡಿ ನಮಾಝ್ ಮಾಡುತ್ತಿರುವಾಗ ನೀರು ಸಿಗುತ್ತದೆಯೆಂದು ತಿಳಿದು ಬಂದರೆ ಅವನು ನಮಾಝ್ ಮುರಿದು ವುಝೂ ಮಾಡಬೇಕು.

ನಜಸ್ ಅಥವಾ ಮಾಲಿನ್ಯ

ಇದರಲ್ಲಿ ಮೂರು ವಿಧ– 1. ಗಲೀಝ. 2. ಮುತವಸ್ಸಿತ. 3. ಖಫೀಫ.

1. ಗಲೀಝ (ತೀವ್ರತರ ಮಾಲಿನ್ಯ): ನಾಯಿ, ಹಂದಿ – ಇವುಗಳ ಬೆವರು, ಜೊಲ್ಲು ಇತ್ಯಾದಿ.

2. ಮುತವಸ್ಸಿತ (ಮಧ್ಯಮತರ ಮಾಲಿನ್ಯ): ಮನುಷ್ಯ ಮತ್ತು ಪ್ರಾಣಿಗಳ ಮಲಮೂತ್ರ, ವಾಂತಿ, ರಕ್ತ, ಕೀವು ಇತ್ಯಾದಿ.

3. ಖಫೀಫ (ಕನಿಷ್ಠತರ ಮಾಲಿನ್ಯ): ಮೊಲೆಹಾಲಲ್ಲದೆ ಬೇರೇನನ್ನೂ ಸೇವಿಸಿರದ ಪುಟ್ಟ ಮಗುವಿನ ಮೂತ್ರ.

ಶರೀರ, ಬಟ್ಟೆ ಹಾಗೂ ನಮಾಝ್‌ನ ಸ್ಥಳಗಳು ಮಲಿನವಾದರೆ ಅವುಗಳನ್ನು ತೊಳೆದು ಶುಚಿಗೊಳಿಸಬೇಕು.

ತೀವ್ರತರದ ಮಾಲಿನ್ಯವನ್ನು ಹೋಗಲಾಡಿಸಲು ಮೊದಲು ಆ ವಸ್ತುವನ್ನು ನೀರಿನಿಂದ ತೊಳೆಯಬೇಕು. ತರುವಾಯ ಮಣ್ಣು ಕಲಸಿದ ನೀರಿನಿಂದ ತೊಳೆಯಬೇಕು. ಆ ಬಳಿಕ 5 ಸಲ ಕೇವಲ ನೀರಿನಿಂದ ತೊಳೆಯಬೇಕು.

ಮಧ್ಯಮ ತರದ ಮಾಲಿನ್ಯವು ಯಾವುದೇ ವಸ್ತುವಿಗೆ ತಾಗಿದ್ದು ಅದು ಕಣ್ಣಿಗೆ ಕಾಣುವಂತಹದ್ದು ಅಥವಾ ವಾಸನೆಯಿರುವಂತಹದ್ದಾಗಿದ್ದರೆ, ಅದರ ಚಿಹ್ನೆಯೂ ಅಳಿದು ಹೋಗುವಂತೆ ಅದನ್ನು ತೊಳೆಯಬೇಕು. ಕಣ್ಣಿಗೆ ಕಾಣದ ಅಥವಾ ವಾಸನೆಯಿಲ್ಲದ ಮಾಲಿನ್ಯ ತಾಗಿದ್ದರೆ ಒಂದು ಬಾರಿ ನೀರು ಹಾಯಿಸಿದರೆ ಸಾಕು. ಕನಿಷ್ಠ ತರದ ಮಾಲಿನ್ಯವು ಕೇವಲ ನೀರು ಚಿಮುಕಿಸುವುದರಿಂದ ದೂರವಾಗುತ್ತದೆ.

ನಮಾಝ್‌ನ ನಿಯಮಗಳು

ಸಮಯ

1. **ಫಜ್ರ್:** ಪೂರ್ವ ದಿಗಂತದಲ್ಲಿ ಪ್ರಭಾತದ ವೇಳೆ ಬಿಳಿಯ ಗೆರೆಗಳು ಮೂಡುತ್ತವೆ. ಆ ಬಳಿಕ ದಿಗಂತದ ಮೇಲೆ ಬೆಳಕು ಹರಡತೊಡಗುತ್ತದೆ. ಆ ಸಮಯದಿಂದ ಸೂರ್ಯೋದಯದ ವರೆಗೆ ಫಜ್ರ್ (ಪ್ರಭಾತ) ನಮಾಝ್‌ನ ಸಮಯವಾಗಿರುತ್ತದೆ.

2. **ಝುಹರ್:** ಸೂರ್ಯನು ನಡುನೆತ್ತಿಗೇರಿ ಇಳಿಮುಖವಾಗುವ ಸಮಯದಿಂದ ಪ್ರತಿಯೊಂದು ವಸ್ತುವಿನ ನೆರಳು ಅದರಷ್ಟೇ ಗಾತ್ರಕ್ಕೆ ಮುಟ್ಟುವ ಸಮಯದ ವರೆಗೆ.

3. **ಅಸರ್:** ಝುಹರ್‌ನ ಅಂತಿಮ ಸಮಯವಾದ ಕೂಡಲೇ ಆರಂಭಗೊಂಡು ಸೂರ್ಯಾಸ್ತಮಾನದ ವರೆಗೆ.

4. **ಮಗ್ರಿಬ್:** ಸೂರ್ಯಾಸ್ತಮಾನದಿಂದ ಪಶ್ಚಿಮ ದಿಗಂತದಲ್ಲಿ ಕೆಂಪು ಬಣ್ಣ ಅಳಿಯುವ ತನಕ.

5. **ಇಶಾ:** ಮಗ್ರಿಬ್‌ನ ಸಮಯದ ಅವಸಾನದಿಂದ ರಾತ್ರಿಯ ಮೂರನೆಯ ಜಾವದ ವರೆಗೆ. ಅಂದರೆ ಸುಮಾರು ಪ್ರಭಾತ ನಮಾಝ್ ಆರಂಭಗೊಳ್ಳುವ ಸಮಯದ ವರೆಗಿರುತ್ತದೆ.

ಅದಾನ್ (ಬಾಂಗ್)

ದಿನದ ಐದು ಹೊತ್ತಿನ ನಮಾಝ್ ಮತ್ತು ಜುಮಾ ನಮಾಝ್‌ಗಳಿಗೆ ಆಯಾ ಹೊತ್ತಿನಲ್ಲಿ ಅದಾನ್ ಹೇಳಬೇಕಾದುದು ಸುನ್ನತ್ ಆಗಿದೆ.

ಮುಅದ್ದಿನ್ (ಅದಾನ್ ಹೇಳುವವ) ವುಝೂ ಉಳ್ಳವನಾಗಿದ್ದು ಕಿಬ್ಲಾಭಿಮುಖವಾಗಿ ನಿಂತು, ತೋರು ಬೆರಳುಗಳನ್ನು ಕಿವಿಯೊಳಗಿಟ್ಟು ಉಚ್ಚ ಸ್ವರದಲ್ಲಿ ರಾಗವಾಗಿ ಅದಾನ್ ಹೇಳಬೇಕು. ಅದಾನ್‌ನ ಶಬ್ದಗಳು ಹೀಗಿವೆ–

ಅಲ್ಲಾಹು ಅಕ್ಬರ್ (ಅಲ್ಲಾಹನೇ ದೊಡ್ಡವನು) – 4 ಸಲ.

ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲವೆಂದು ನಾನು ಸಾಕ್ಷ್ಯ ವಹಿಸುತ್ತೇನೆ) – 2 ಸಲ.

ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್ [ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯ ವಹಿಸುತ್ತೇನೆ] – 2 ಸಲ.

ಹಯ್ಯ ಅಲಸ್ಸಲಾಃ (ಬನ್ನಿ, ನಮಾಝ್‌ಗಾಗಿ) – 2 ಸಲ.

ಹಯ್ಯ ಅಲಲ್ ಫಲಾಹ್ (ಬನ್ನಿ, ವಿಜಯದೆಡೆಗೆ) – 2 ಸಲ.

ಅಲ್ಲಾಹು ಅಕ್ಬರ್ – 2 ಸಲ.

ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ) – 1 ಸಲ.

'ಹಯ್ಯಅಲಸ್ಸಲಾಃ' ಎಂದು ಹೇಳುವಾಗ ಮುಖವನ್ನು ಬಲಬದಿಗೂ 'ಹಯ್ಯ ಅಲಲ್‌ಫಲಾಹ್' ಎನ್ನುವಾಗ ಎಡಬದಿಗೂ ತಿರುಗಿಸಬೇಕು. ಅದಾನ್ ಕೇಳುವವರು ಮುಅದ್ದಿನ್‌ನ ಜೊತೆಗೆ ಅದಾನ್ ವಚನಗಳನ್ನು ಪುನರುಚ್ಚರಿಸಬೇಕು.

ಪ್ರಭಾತ (ಫಜ್ರ್) ನಮಾಝ್‌ನ ಅದಾನ್‌ನಲ್ಲಿ 'ಹಯ್ಯ ಅಲಲ್‌ಫಲಾಹ್' ಆದ ಬಳಿಕ 'ಅಸ್ಸಲಾತು ಖೈರುಮ್ಮಿನನ್ನೌಮ್' (ನಮಾಝ್ ನಿದ್ರೆಗಿಂತ ಶ್ರೇಷ್ಠ) ಎಂದು ಎರಡು ಸಲ ಹೇಳಬೇಕು.

ಅದಾನ್ ಮುಗಿದ ಬಳಿಕ ಈ ದುಆ ಪಠಿಸಬೇಕು–

اَللّٰهُمَّ رَبَّ هٰذِهِ الدَّعْوَةِ التَّامَّةِ، وَالصَّلٰوةِ الْقَآئِمَةِ اٰتِ مُحَمَّدَنِ الْوَسِيْلَةَ وَالْفَضِيْلَةَ، وَالدَّرَجَةَ الرَّفِيعَةَ وَابْعَثْهُ مَقَامًا مَّحْمُوْدَانِ الَّذِىْ وَعَدْتَّهُ اِنَّكَ لَا تُخْلِفُ الْمِيعَادَ

"ಅಲ್ಲಾಹುಮ್ಮ ರಬ್ಬ ಹಾದಿಹಿದ್ದಅ್‌ವತಿತ್ತಾಮ್ಮತಿ, ವಸ್ಸಲಾತಿಲ್ ಕಾಇಮತಿ ಆತಿ ಮುಹಮ್ಮದನಿಲ್ ವಸೀಲತ ವಲ್ ಫದೀಲತ, ವದ್ದರಜತರ್‌ರಫೀಅತ ವಬ್‌ಅಸ್‌ಹು ಮಕಾಮಮ್ಮಹ್ಮೂದನಿಲ್ಲದೀ ವಅತ್ತಹು. ಇನ್ನಕ ಲಾ ತುಖ್‌ಲಿಫುಲ್ ಮೀಆದ್."

(ಓ ಅಲ್ಲಾಹ್! ಈ ಪೂರ್ಣವಾದ ಕರೆ ಮತ್ತು ಈ ನಿಲ್ಲುವ ನಮಾಝ್‌ನ ಒಡೆಯನೇ! ಮುಹಮ್ಮದ್‌ರಿಗೆ(ಸ) ನಿನ್ನ ಸಾಮಿಪ್ಯ, ಔನ್ನತ್ಯ ಮತ್ತು ಉನ್ನತ ಸ್ಥಾನವನ್ನೂ ದಯಪಾಲಿಸು! ನೀನು ಅವರಿಗೆ ವಾಗ್ದಾನ ಮಾಡಿರುವ ಮಕಾಮು ಮಹ್ಮೂದ್(ಅತ್ಯುನ್ನತ ಸ್ತುತ್ಯರ್ಹ ಸ್ಥಾನ)ನಲ್ಲಿ ಅವರನ್ನು ಪ್ರತಿಷ್ಠಾಪಿಸು. ಖಂಡಿತವಾಗಿಯೂ ನೀನು ವಾಗ್ದಾನವನ್ನು ಮೀರುವವನಲ್ಲ.)

ಇಕಾಮತ್

ಫರ್ಝ್ ನಮಾಝ್ ಮಾಡಲು ಅಣಿಯಾದಾಗ ಇಕಾಮತ್ ಹೇಳಬೇಕಾದುದು ಸುನ್ನತ್ ಆಗಿದೆ. ಇಕಾಮತ್ ಹೇಳುವವನು ಕಿಬ್ಲಾಭಿಮುಖವಾಗಿ ನಿಂತು ಹೇಳಬೇಕು. ಕಿವಿಯೊಳಗೆ ಬೆರಳಿಡಬಾರದು. ಇಕಾಮತ್‌ನ ಶಬ್ದಗಳನ್ನು ಬೇಗಬೇಗನೆ ಪಠಿಸಬೇಕು. ಅದಾನ್‌ನ ಶಬ್ದಗಳಿಂದಲೇ ಇಕಾಮತ್ ಪಠಿಸಲಾಗುವುದು–

ಅಲ್ಲಾಹು ಅಕ್ಬರ್ (2 ಸಲ), ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್, ಅಶ್‌ಹದು ಅನ್ನಮುಹಮ್ಮದರ್ರಸೂಲುಲ್ಲಾಹ್, ಹಯ್ಯ ಅಲಸ್ಸಲಾಃ, ಹಯ್ಯಅಲಲ್ ಫಲಾಹ್, (ಒಂದೊಂದು ಸಲ) ಕದ್‌ಕಾಮತಿಸ್ಸಲಾಃ (2 ಸಲ), ಅಲ್ಲಾಹು ಅಕ್ಬರ್ (2 ಸಲ), ಲಾ ಇಲಾಹ ಇಲ್ಲಲ್ಲಾಹ್.

ನಮಾಝ್‌ನ ನಿಬಂಧನೆಗಳು

1. ಶರೀರ ಶುದ್ಧವಾಗಿರುವುದು, ಉಡುಪು ಮತ್ತು ನಮಾಝ್‌ನ ಸ್ಥಳ ಶುದ್ಧವಾಗಿರುವುದು.

2. 'ಔರತ್' ಮರೆಸುವುದು.

3. ಕಿಬ್ಲಾಭಿಮುಖವಾಗಿರುವುದು.

4. ನಮಾಝ್‌ನ ಸಮಯವಾಗಿದೆಯೆಂಬುದನ್ನು ತಿಳಿದುಕೊಳ್ಳುವುದು.

ಸ್ತ್ರೀ-ಪುರುಷರು ಕಡ್ಡಾಯವಾಗಿ ಮುಚ್ಚಬೇಕಾದ ಶರೀರದ ಭಾಗವನ್ನು 'ಔರತ್' ಎನ್ನುತ್ತಾರೆ. ಪುರುಷನ ಔರತ್ ನಾಭಿಯಿಂದ ಮೊಣಕಾಲ ಗಂಟುಗಳ ವರೆಗೆ ಮಾತ್ರ, ಸ್ತ್ರೀಯ ಔರತ್ ಮುಂಗೈ ಮತ್ತು ಮುಖ ಬಿಟ್ಟು ಇಡೀ ಶರೀರ.

ಕಿಬ್ಲಾದ ದಿಕ್ಕು ತಿಳಿದಿರದಿದ್ದರೆ ಅಥವಾ ಇನ್ನಾವುದೇ ರೀತಿಯಿಂದಾಗಲೀ ಕಿಬ್ಲಾ ನಿರ್ಣಯಿಸಲಾಗದಿದ್ದರೆ ನಮ್ಮ ಮನಸ್ಸಿಗೆ ಖಾತ್ರಿಯಾದ ದಿಕ್ಕಿಗೇ ಮುಖಮಾಡಿ ನಮಾಝ್ ಮಾಡಬಹುದು.

ನಮಾಝ್‌ನ ಫರ್ಝ್‌ಗಳು

1. ನಿಯ್ಯತ್.

2. ತಕ್ಬೀರ್ ತಹ್ರೀಮಃ. ನಮಾಝ್ ಆರಂಭಿಸುವಾಗ **ಅಲ್ಲಾಹು ಅಕ್ಬರ್** ಎಂದು ಹೇಳುವುದು.

3. ಕಿಯಾಮ್- (ನಿಲ್ಲುವುದು.)

4. ಪ್ರತಿ ರಕಅತ್‌ನ ಕಿಯಾಮ್‌ನಲ್ಲಿ ಸೂರಃ ಫಾತಿಹಾ ಓದುವುದು.

5. ರುಕೂಅ್ - (ಬಾಗುವುದು.)

6. ಕೌಮ- (ರುಕೂಅ್‌ನಿಂದ ಎದ್ದು ನೇರವಾಗಿ ನಿಲ್ಲುವುದು.)

7. ಎರಡು ಸುಜೂದ್ - (ಸಾಷ್ಟಾಂಗವೆರಗುವುದು.)

8. ಎರಡು ಸುಜೂದ್‌ಗಳ ನಡುವೆ ಕುಳಿತುಕೊಳ್ಳುವುದು.

9. ರುಕೂಅ್, ಕೌಮ, ಸುಜೂದ್ ಮತ್ತು ಸುಜೂದ್‌ಗಳ ಮಧ್ಯೆ ಸ್ವಲ್ಪ ಹೊತ್ತು ತಂಗುವುದು.

10. ಕಅದ ಅಖೀರ – (ನಮಾಝ್‌ನ ಕೊನೆಯಲ್ಲಿ ಕುಳಿತುಕೊಳ್ಳುವುದು.)

11. ತಶಹ್ಹುದ್ ಅರ್ಥಾತ್ ಅತ್ತಹಿಯ್ಯಾತ್ ಪಠಿಸುವುದು.

12. ತಶಹ್ಹುದ್‌ನ ನಂತರ ಪ್ರವಾದಿಯವರ(ಸ) ಮೇಲೆ ದರೂದ್ ಹೇಳುವುದು.

13. ನಮಾಝ್ ಮುಗಿದಾಗ **'ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್'** ಎಂದು ಒಮ್ಮೆ ಹೇಳುವುದು.

14. ತರ್ತೀಬ್– ಅಂದರೆ ಕ್ರಮ ಪ್ರಕಾರ ಮಾಡುವುದು.

ನಮಾಝ್‌ನ ಸುನ್ನತ್‌ಗಳು

1. ಎರಡು ಕೈಗಳನ್ನೆತ್ತುವುದು – ತಕ್ಬೀರ್ ತಹ್ರೀಮಃ ಹೇಳುವಾಗ, ರುಕೂಅ್‌ಗೆ ಹೋಗುವಾಗ, ರುಕೂಅ್‌ನಿಂದ ಏಳುವಾಗ ಮತ್ತು ಮೂರನೆಯ ರಕಅತ್‌ಗೆ ಎದ್ದು ನಿಲ್ಲುವಾಗ ಎರಡೂ ಕೈಗಳನ್ನು ಭುಜಗಳ ವರೆಗೆ ಎತ್ತಬೇಕು. ಅಂಗೈಯು ಕಿಬ್ಲಾಭಿಮುಖವಾಗಿರಬೇಕು. ಕೈ ಬೆರಳುಗಳು ಆಗ ಸೇರಿಕೊಂಡಿರಬಾರದು, ತುಂಬಾ ಬಿಡಿಸಿಯೂ ಇರಬಾರದು.

2. ಕಿಯಾಮ್‌ನಲ್ಲಿ ಎದೆ ಮತ್ತು ನಾಭಿಯ ನಡುವೆ ಎಡಗೈಯಿಟ್ಟು, ಅದರ ಮೇಲೆ ಬಲಕೈಯನ್ನು ಇಟ್ಟು ಕೈ ಕಟ್ಟಿ ನಿಲ್ಲುವುದು.

3. ಮೊದಲ ರಕಅತ್‌ನಲ್ಲಿ ಮೌನವಾಗಿ ವಜ್ಜಹ್ತು ಓದುವುದು.

4. ಪ್ರತಿ ರಕಅತ್‌ನಲ್ಲಿ **'ಅಊದುಬಿಲ್ಲಾಹ್'** ಮೆಲ್ಲನೆ ಓದುವುದು.

5. ಸೂರಃ ಫಾತಿಹಾದ ಕೊನೆಯಲ್ಲಿ **'ಆಮೀನ್'** ಎಂದು ಹೇಳುವುದು.

6. ಸೂರಃ ಫಾತಿಹಾ ಪಠಿಸಿದ ಬಳಿಕ ಯಾವುದಾದರೂ ಒಂದು ಅಧ್ಯಾಯ ಅಥವಾ ಕನಿಷ್ಠ ಮೂರು ಸೂಕ್ತಗಳನ್ನು ಪಠಿಸುವುದು.

7. ಪ್ರತಿ ಸಲ ರುಕೂಅ್‌ಗೆ ಹೋಗುವಾಗಲೂ ಸುಜೂದ್‌ಗೆ ಹೋಗುವಾಗಲೂ ಸುಜೂದ್‌ನಿಂದ ಏಳುವಾಗಲೂ ಮೂರನೆಯ ರಕಅತ್‌ಗಾಗಿ ಎದ್ದು ನಿಲ್ಲುವಾಗಲೂ **'ಅಲ್ಲಾಹು ಅಕ್ಬರ್'** ಎಂದು ಹೇಳುವುದು.

8. ರುಕೂಅ್‌ನಲ್ಲಿ ಬಾಗಿದಾಗ ಕೈ ಬೆರಳುಗಳನ್ನು ಬಿಡಿಸಿ ಮೊಣಗಂಟಿನ ಮೇಲಿಡುವುದು. ಬೆನ್ನು ಮತ್ತು ತಲೆ ಸಮಾಂತರವಾಗಿರುವಂತೆ ನೋಡಿ ಕೊಳ್ಳುವುದು.

9. ರುಕೂಅ್‌ನಲ್ಲಿ ಮೂರರಿಂದ ಹನ್ನೊಂದರ ವರೆಗೆ ತಸ್ಬೀಹ್ (**ಸುಬ್‌ಹಾನ ರಬ್ಬಿಯಲ್ ಅಝೀಮ್ ವಬಿಹಮ್ದಿಹೀ**) ಹೇಳುವುದು.

10. ರುಕೂಅ್‌ನಿಂದ ತಲೆ ಎತ್ತುವಾಗ **'ಸಮಿಅಲ್ಲಾಹುಲಿಮನ್ ಹಮಿದಃ'** ಎಂದೂ ನೆಟ್ಟಗೆ ನಿಂತ ಬಳಿಕ **'ರಬ್ಬನಾ ಲಕಲ್ ಹಮ್ದ್'** ಎಂದೂ ಹೇಳುವುದು.

11. ಪ್ರಭಾತ (ಫಜ್ರ್) ನಮಾಝ್‌ನ ಎರಡನೆಯ ರಕಅತ್‌ನಲ್ಲಿ ಮತ್ತು ರಮಝಾನ್ ತಿಂಗಳ 16ರಿಂದ ಕೊನೆಯ ವರೆಗೆ ವಿತ್ರ್ ನಮಾಝ್‌ನ ಕೊನೆಯ ಒಂದು ರಕಅತ್‌ನಲ್ಲಿ ರುಕೂಅ್‌ನಿಂದ ಎದ್ದು ನಿಂತಾಗ 'ಕುನೂತ್' ಪಠಿಸುವುದು.

12. ಸುಜೂದ್‌ಗೆ ಹೋಗುವಾಗ ಮೊದಲು ಕಾಲಿನ ಮೊಣಗಂಟುಗಳನ್ನು, ಆ ಬಳಿಕ ಹೆಗಲಿಗೆ ಸಮಾನವಾಗಿ ಅಂಗೈಗಳನ್ನು, ಅನಂತರ ಮೂಗು ಮತ್ತು ಹಣೆಗಳನ್ನು ನೆಲದ ಮೇಲಿಡುವುದು. ಆಗ ಕೈ ಬೆರಳುಗಳನ್ನು ಸೇರಿಸಿಡಬೇಕು. ಕೈಯ ಮೊಣಗಂಟುಗಳು ನೆಲದಿಂದ ಮೇಲಿದ್ದು ಪಾರ್ಶ್ವಗಳಿಂದ ದೂರವಿರಬೇಕು. ಕೈ–ಕಾಲುಗಳ ಬೆರಳುಗಳು ಕಿಬ್ಲಾಭಿಮುಖವಾಗಿರಬೇಕು. ಎರಡೂ ಪಾದಗಳ ಮಧ್ಯೆ ಒಂದು ಗೇಣು ಅಂತರವಿರಬೇಕು.

13. ಸುಜೂದ್‌ನಲ್ಲಿ 3ರಿಂದ 11ರ ವರೆಗೆ ತಸ್ಬೀಹ್ (**ಸುಬ್‌ಹಾನ ರಬ್ಬಿಯಲ್ ಅಅ್‌ಲಾ ವಬಿಹಮ್ದಿಹೀ**) ಹೇಳುವುದು.

14. ಎರಡು ಸುಜೂದ್‌ಗಳ ಮಧ್ಯೆ ಕುಳಿತಿರುವಾಗ ಪ್ರಾರ್ಥಿಸುವುದು. **ರಬ್ಬಿಗ್‌ಫಿರ್‌ಲೀ, ವರ್‌ಹಮ್ನೀ, ವಜ್‌ಬುರ್‌ನೀ, ವರ್‌ಫಅ್‌ನೀ, ವರ್‌ಝುಕ್‌ನೀ, ವಹ್ದಿನೀ, ವಆಫಿನೀ.**

15. ಇಸ್ತಿರಾಹತ್– ಎರಡನೆಯ ಮತ್ತು ನಾಲ್ಕನೆಯ ರಕಅತ್‌ಗಾಗಿ ಎದ್ದು ನಿಲ್ಲುವಾಗ ತುಸು ಕುಳಿತುಕೊಳ್ಳುವುದು.

16. ಮೂರು ಮತ್ತು ನಾಲ್ಕು ರಕಅತ್‌ಗಳ ನಮಾಝ್‌ನಲ್ಲಿ ಎರಡು ರಕಅತ್‌ಗಳ ನಂತರ ಕುಳಿತುಕೊಂಡು 'ಅತ್ತಹಿಯ್ಯಾತ್' ಪಠಿಸುವುದು.

ನಮಾಝ್ ಭಂಗಗೊಳ್ಳುವ ಕಾರ್ಯಗಳು

1. ಉದ್ದೇಶಪೂರ್ವಕವಾಗಿ ಮಾತನಾಡುವುದು. (ಮರೆವಿನಿಂದ ಏನಾದರೂ ಹೇಳಿದರೆ ನಮಾಝ್ ಭಂಗವಾಗುವುದಿಲ್ಲ.)

2. ಸಲಾಮ್ ಹೇಳುವುದು, ಇತರರ ಸಲಾಮ್‌ಗೆ ಉತ್ತರಿಸುವುದು ಅಥವಾ ಸೀನು ಬಂದರೆ **'ಅಲ್ ಹಮ್ದುಲಿಲ್ಲಾಹ್'** ಎಂದು ಹೇಳುವುದು.

3. ಏನಾ ಕಾರಣ ಕೆಮ್ಮುವಾಗ ಅಥವಾ ಕೆಕ್ಕರಿಸುವಾಗ ಕನಿಷ್ಠ ಎರಡು ಶಬ್ದಗಳನ್ನು ಹೊರಡಿಸುವುದು.

4. ನಮಾಝ್ ಮುರಿಯಬೇಕೆಂಬ ಸಂಕಲ್ಪ ಮಾಡುವುದು.

5. ತಿನ್ನುವುದು, ಕುಡಿಯುವುದು.


6. ನಮಾಝ್‌ನಲ್ಲಿ ಸೇರಿಲ್ಲದ ಯಾವುದಾದರೂ ಕಾರ್ಯವನ್ನು ಪದೇಪದೇ

ಮಾಡುವುದು. ಉದಾ: ಮೂರು ಹೆಜ್ಜೆ ನಡೆಯುವುದು. ಶರೀರದ ಯಾವುದಾದರೂ ಭಾಗವನ್ನು ಕನಿಷ್ಠ ಮೂರು ಬಾರಿ ಅಲ್ಲಾಡಿಸುವುದು.

ನಮಾಝ್ ನಿರ್ವಹಿಸುವುದು ಹೇಗೆ?

ಮೊತ್ತ ಮೊದಲು ಕಿಬ್ಲಾಕ್ಕೆ ಮುಖಮಾಡಿ ನಿಂತು 'ಅದಾನ್' ಮತ್ತು 'ಇಕಾಮತ್' ಹೇಳಬೇಕು. ದೃಷ್ಟಿಯು ಸುಜೂದ್ ಮಾಡುವ ಸ್ಥಳದಲ್ಲಿರಬೇಕು.

ತರುವಾಯ ನಮಾಝ್‌ನ ನಿಯ್ಯತ್ (ಸಂಕಲ್ಪ) ಮಾಡಿ ಎರಡೂ ಕೈಗಳನ್ನು ಭುಜಗಳ ವರೆಗೆ ಎತ್ತಿ '**ಅಲ್ಲಾಹು ಅಕ್ಬರ್**' ಎನ್ನುತ್ತಾ ಹೊಟ್ಟೆ ಮತ್ತು ಎದೆಯ ಮಧ್ಯೆ ಕಟ್ಟಬೇಕು. ಕೈಯೆತ್ತುವಾಗ ಹಸ್ತಗಳು ಕಿಬ್ಲಾಭಿಮುಖವಾಗಿರಬೇಕು. ಕೈ ಬೆರಳುಗಳನ್ನು ಸೇರಿಸಿಡಬೇಕು.



ಕೈ ಎತ್ತುವುದು



ಕೈ ಕಟ್ಟುವುದು

ತರುವಾಯ ವಜ್ಜಹ್ತು ಪಠಿಸಬೇಕು.

وَجَّهْتُ وَجْهِىَ لِلَّذِى فَطَرَ السَّمٰوَاتِ وَالْاَرْضَ
حَنِيْفاً مُسْلِمً وَّمَا اَنَا مِنَ الْمُشْرِكِينَ اِنَّ صَلَاتِى وَنُسُكِى
وَمَحْيَاىَ وَمَمَاتِى لِلّٰهِ رَبِّ الْعَالَمِينَ، لَاشَرِيْكَ لَهُ وَ بِذٰلِكَ
اُمِرْتُ وَاَنَا مِنَ الْمُسْلِمِينَ،

"ವಜ್ಜಹ್ತು ವಜ್‌ಹಿಯ ಲಿಲ್ಲದೀ ಫತರಸ್ಸಮಾವಾತಿ ವಲ್ ಅರ್ದ ಹನೀಫನ್

ಮುಸ್ಲಿಮನ್ ವಮಾ ಅನ ಮಿನಲ್ ಮುಶ್ರಿಕೀನ್. ಇನ್ನ ಸಲಾತೀ ವನುಸುಕೀ ವಮಹ್ಯಾಯ ವಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್. ಲಾ ಶರೀಕ ಲಹೂ ವಬಿದಾಲಿಕ ಉಮಿರ್ತು ವ ಅನ ಮಿನಲ್ ಮುಸ್ಲಿಮೀನ್."

(ನಾನು ನನ್ನ ಮುಖವನ್ನು ಭೂಮಿ-ಆಕಾಶಗಳನ್ನು ಸೃಷ್ಟಿಸಿದವನ ಕಡೆಗೆ ತಿರುಗಿಸಿದೆ. ನಾನು ನೇರ ಮಾರ್ಗದಲ್ಲಿದ್ದುಕೊಂಡು ಮತ್ತು ಮುಸ್ಲಿಮ್ (ವಿಧೇಯ) ಆಗಿದ್ದುಕೊಂಡು. ನಾನು ಬಹುದೇವ ವಿಶ್ವಾಸಿಗಳಲ್ಲಿ ಸೇರಿಲ್ಲ. ನಿಶ್ಚಯವಾಗಿಯೂ ನನ್ನ ನಮಾಝ್, ನನ್ನ ಬಲಿದಾನ, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿದೆ. ಅವನಿಗಾರೂ ಭಾಗೀದಾರರಿಲ್ಲ. ನನಗೆ ಅದನ್ನೇ ಆಜ್ಞಾಪಿಸಲಾಗಿದೆ. ನಾನು ಮುಸ್ಲಿಮರಲ್ಲಾಗಿರುವೆನು.)

ಅನಂತರ

أَعُوْذُ بِاللّٰهِ مِنَ الشَّيْطَانِ الرَّجِيْمِ

"ಅವೂದುಬಿಲ್ಲಾಹಿ ಮಿನಶ್ಶೈತಾನಿರ್‍ರಜೀಮ್" ಪಠಿಸಬೇಕು.

(ಶಪಿತ ಶೈತಾನನ ಕಿರುಕುಳದಿಂದ ನಾನು ಅಲ್ಲಾಹನ ಅಭಯ ಯಾಚಿಸುತ್ತೇನೆ.)

ಆ ಬಳಿಕ 'ಸೂರಃ ಫಾತಿಹಾ' ಓದಬೇಕು.

'ಸೂರಃ ಫಾತಿಹಾ} ಓದಿದ ನಂತರ ಪವಿತ್ರ ಕುರ್‌ಆನಿನ ಯಾವುದಾದರೂ ಚಿಕ್ಕ ಅಧ್ಯಾಯ ಪಠಿಸಬೇಕು ಅಥವಾ ದೊಡ್ಡ ಅಧ್ಯಾಯಗಳಿಂದ ಕನಿಷ್ಠ ಮೂರು ಸೂಕ್ತಗಳನ್ನು ಪಠಿಸಬೇಕು. [ಸೂರಃ ಫಾತಿಹಾ ಮತ್ತು ಕೆಲವು ಸಣ್ಣ ಅಧ್ಯಾಯಗಳನ್ನು ಪುಸ್ತಕದ ಕೊನೆಯಲ್ಲಿ ನೀಡಲಾಗಿದೆ.]

ಅನಂತರ ಮೇಲೆ ಸೂಚಿಸಿದಂತೆ, ಎರಡೂ ಕೈಗಳನ್ನು ಪುನಃ ಭುಜಗಳ ವರೆಗೆ ಎತ್ತಿ ರುಕೂಅ್ ಮಾಡಬೇಕು (ಬಾಗಬೇಕು). ರುಕೂಅ್‌ನಲ್ಲಿ ಬೆನ್ನು ಸಮತಟ್ಟಾಗಿರಬೇಕು. ಹಸ್ತಗಳು ಕಾಲ ಮೊಣಗಂಟನ್ನು ಹಿಡಿದಿರಬೇಕು. ರುಕೂಅ್‌ನಲ್ಲಿ-

سُبْحَانَ رَبِّيَ الْعَظِيمِ وَبِحَمْدِهِ


"ಸುಬ್‌ಹಾನ ರಬ್ಬಿಯಲ್ ಅಝೀಮ್ ವಬಿಹಮ್ದಿಹೀ" (ಅತಿ ಮಹಾನನಾದ ನನ್ನ ಪ್ರಭು ಅತ್ಯಂತ ಪಾವನನು ಎಂಬ ಅವನ ಸ್ತುತಿಯೊಂದಿಗೆ- ಬಾಗುತ್ತಿದ್ದೇನೆ.) ಎಂಬ ದಿಕ್ರ್ ಪಠಿಸಬೇಕು. ಅನಂತರ سَمِعَ اللّٰهُ لِمَنْ حَمِدَهُ، **"ಸಮಿಅಲ್ಲಾಹು ಲಿಮನ್ ಹಮಿದಃ"** (ಅಲ್ಲಾಹನನ್ನು ಸ್ತುತಿಸಿದವನ ಸ್ತುತಿಯನ್ನು ಅವನು ಆಲಿಸಿದನು) ಎನ್ನುತ್ತಾ ತಲೆ ಎತ್ತಬೇಕು. ಆಗಲೂ ಕೈಗಳನ್ನು ಪುನಃ

ಭುಜಗಳ ವರೆಗೆ ಎತ್ತಬೇಕು. ಅನಂತರ رَبَّنَا وَلَكَ الْحَمْدُ، "ರಬ್ಬನಾ ಲಕಲ್ ಹಮ್ದು" (ನಮ್ಮ ಪ್ರಭೂ ಸರ್ವ ಸ್ತುತಿಯೂ ನಿನಗೇ ಆಗಿದೆ) ಎನ್ನುತ್ತಾ ಕೈಗಳನ್ನು ಕೆಳಗಿರಿಸಿ ಕೆಲವು ಕ್ಷಣ ನೇರವಾಗಿ ನಿಲ್ಲಬೇಕು. ಹಾಗೆ ನಿಂತಿರುವಾಗ–

مِلْأَ السَّمٰوَاتِ وَمِلْأَ الْاَرْضِ، وَمِلْأَ مَاشِئْتَ مِنْ شَيْئٍ بَعْدُ

"ಮಿಲ್‌ಅಸ್ಸಮಾವಾತಿ ವಮಿಲ್‌ಅಲ್ ಅರ್ದಿ, ವಮಿಲ್‌ಅ ಮಾ ಶಿಅ್‌ತ ಮಿನ್ ಶೈಇನ್ ಬಅ್‌ದು."

(ಭೂಮಿ–ಆಕಾಶಗಳು ತುಂಬುವಷ್ಟು ಹಾಗೂ ನೀನಿಚ್ಛಿಸಿದ ಸಕಲ ವಸ್ತುಗಳೂ ತುಂಬುವಷ್ಟು) ಎಂಬ ದಿಕ್ರ್‌ಗಳನ್ನು ಪಠಿಸಬಹುದು.



ರುಕೂಅ್ ತಲೆ ಎತ್ತುವುದು ಕೈಗಳನ್ನು ಕೆಳಗೆ ಮಾಡಿ ನಿಲ್ಲುವುದು

ಅನಂತರ 'ಅಲ್ಲಾಹು ಅಕ್ಬರ್' ಎನ್ನುತ್ತಾ ಸುಜೂದ್‌ಗೆ ಹೋಗಬೇಕು. ಆಗ ಮೊದಲು ಎರಡು ಕಾಲ ಮೊಣಗಂಟುಗಳು, ನಂತರ ಎರಡೂ ಅಂಗೈಗಳು ಆ ಬಳಿಕ ಹಣೆ ಮತ್ತು ಮೂಗು ನೆಲಕ್ಕೆ ತಾಗುವಂತಿರಬೇಕು.

ಸುಜೂದ್‌ನಲ್ಲಿ

سُبْحَانَ رَبِّيَ الْاَعْلٰى وَبِحَمْدِهٖ

"ಸುಬ್‌ಹಾನ ರಬ್ಬಿಯಲ್ ಅಅ್‌ಲಾ ವಬಿಹಮ್ದಿಹೀ."

[ಅತ್ಯುನ್ನತನಾದ ನನ್ನ ಪ್ರಭು ಅತ್ಯಂತ ಪಾವನನು– ಅವನ ಸ್ತುತಿಯೊಂದಿಗೆ (ಸಾಷ್ಟಾಂಗವೆರಗುತ್ತಿದ್ದೇನೆ)]. ಅಥವಾ

سُبْحَانَكَ اَللّٰهُمَّ رَبَّنَا وَبِحَمْدِكَ، اَللّٰهُمَّ اغْفِرْلِي

"ಸುಬ್‌ಹಾನಕಲ್ಲಾಹುಮ್ಮ ರಬ್ಬನಾ ವಬಿಹಮ್‌ದಿಕ ಅಲ್ಲಾಹುಮ್ಮಗ್‌ಫಿರ್‌ಲೀ."

(ಓ ಅಲ್ಲಾಹ್! ಓ ನಮ್ಮ ಪ್ರಭೂ! ನೀನು ಪಾವನನು. ನಾವು ನಿನ್ನನ್ನು ಸ್ತುತಿಸುತ್ತೇವೆ. ಓ ಅಲ್ಲಾಹ್! ನಮ್ಮನ್ನು ಕ್ಷಮಿಸು.)

ಸುಜೂದ್‌ನಿಂದ **'ಅಲ್ಲಾಹು ಅಕ್ಬರ್'** ಎನ್ನುತ್ತಾ ತಲೆಯೆತ್ತಿ ಎರಡು ಅಂಗೈಗಳು ತೊಡೆಗಳ ಮೇಲೆ ಕಿಬ್ಲಾಭಿಮುಖವಾಗಿ ಇರುವಂತೆ ಮತ್ತು ಬಲಪಾದವು ನೇರವಾಗಿ, ಅದರ ಬೆರಳುಗಳು ಕಿಬ್ಲಾಭಿಮುಖವಾಗಿರುವಂತೆ ಎಡಕಾಲ ಹರಡಿನ ಮೇಲೆ ಕುಳಿತುಕೊಳ್ಳಬೇಕು. ಹಾಗೆ ಕೆಲವು ಕ್ಷಣ ಕುಳಿತಿರುವಾಗ ಈ ದಿಕ್ರ್ ಪಠಿಸಬಹುದು–

رَبِّ اغْفِرْلِي، وَارْحَمْنِي، وَاجْبُرْنِي، وَارْفَعْنِي، وَارْزُقْنِي، وَاهْدِنِي، وَعَافِنِي

"ರಬ್ಬಿಗ್‌ಫಿರ್‌ಲೀ, ವರ್‌ಹಮ್ನೀ, ವಜ್‌ಬುರ್‌ನೀ, ವರ್‌ಫಅ್‌ನೀ, ವರ್‌ಝುಕ್‌ನೀ, ವಹ್ದಿನೀ, ವ ಆಫಿನೀ."

(ನನ್ನ ಪ್ರಭೂ! ನನ್ನನ್ನು ಕ್ಷಮಿಸು. ನನ್ನ ಮೇಲೆ ಕೃಪೆ ತೋರು, ನನ್ನ ಕುಂದುಕೊರತೆಗಳನ್ನು ನೀಗಿಸು, ನನ್ನನ್ನು ಉನ್ನತಗೊಳಿಸು, ನನಗೆ ಜೀವನಾಧಾರ ದಯಪಾಲಿಸು, ನನ್ನನ್ನು ಸನ್ಮಾರ್ಗದಲ್ಲಿ ನಡೆಸು ಮತ್ತು ನನಗೆ ಆರೋಗ್ಯ ಪ್ರದಾನ ಮಾಡು.)

ಅನಂತರ ಪುನಃ ಎರಡನೆಯ ಸುಜೂದ್‌ಗೆ ಹೋಗಬೇಕು.



ಸುಜೂದ್



ಎರಡು ಸುಜೂದ್‌ಗಳ ನಡುವೆ ಕುಳಿತಿರುವುದು

ಅದರಲ್ಲೂ **'ಸುಬ್‌ಹಾನ ರಬ್ಬಿಯಲ್ ಅಅ್‌ಲಾ ವಬಿಹಮ್ದಿಹೀ'** ಎಂದು ಪಠಿಸಬೇಕು. ತರುವಾಯ ಸುಜೂದ್‌ನಿಂದ ತಲೆಯೆತ್ತಬೇಕು. ಇಲ್ಲಿಗೆ ಒಂದು ರಕಅತ್ ಪೂರ್ಣ ಗೊಂಡಿತು.

ಎರಡನೆಯ ಸುಜೂದ್‌ನಿಂದ ತಲೆಯೆತ್ತುತ್ತಾ ಪುನಃ ಎರಡನೆಯ ರಕಅತ್‌ಗಾಗಿ ಎದ್ದು ನೇರವಾಗಿ ನಿಲ್ಲಬೇಕು. ಅದರಲ್ಲೂ ಮೊದಲಿನ ರಕಅತ್‌ನಂತೆಯೇ 'ಸೂರಃ ಫಾತಿಹಾ' ಮತ್ತು ಯಾವುದಾದರೂ ಅಧ್ಯಾಯ ಅಥವಾ ಕನಿಷ್ಠ ಮೂರು ಸೂಕ್ತ (ಇದು ಮೊದಲಿನ ರಕಅತ್‌ನಲ್ಲಿ ಪಠಿಸಿದ್ದಾಗಿರಬಾರದು) ಪಠಿಸಿ, ಅನಂತರ ರುಕೂಅ್, ಸುಜೂದ್‌ಗಳನ್ನು ಮಾಡಬೇಕು.

ಎರಡನೆಯ ರಕಅತ್‌ನ ಎರಡನೆಯ ಸುಜೂದ್ ಆದ ಬಳಿಕ ಎರಡು ಸುಜೂದ್‌ಗಳ ಮಧ್ಯೆ ಕುಳಿತುಕೊಳ್ಳುವ ಕ್ರಮದಲ್ಲೇ ಎಡಕಾಲ ಹರಡಿನ ಮೇಲೆ ಕುಳಿತುಕೊಳ್ಳಬೇಕು. ಇಲ್ಲಿ ಅತ್ತಹಿಯ್ಯಾತ್ ಪಠಿಸಬೇಕು.

اَلتَّحِيَّاتُ الْمُبَارَكَاتُ الصَّلَوَاتُ الطَّيِّبَاتُ لِلّٰهِ اَلسَّلَامُ عَلَيْكَ اَيُّهَا النَّبِيُّ وَرَحْمَةُ اللّٰهِ وَبَرَكَاتُهُ اَلسَّلَامُ عَلَيْنَا وَعَلٰى عِبَادِ اللّٰهِ الصَّالِحِيْنَ ـ اَشْهَدُ اَنْ لَّآ اِلٰهَ اِلَّا اللّٰهُ وَاَشْهَدُ اَنَّ مُحَمَّدًا رَسُوْلُ اللّٰهِ

"ಅತ್ತಹಿಯ್ಯಾತು ಅಲ್ ಮುಬಾರಕಾತು ಅಸ್ಸಲವಾತು ಅತ್ತಯ್ಯಿಬಾತು ಲಿಲ್ಲಾಹಿ ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು ಅಸ್ಸಲಾಮು ಅಲೈನಾ ವ ಅಲಾ ಇಬಾದಿಲ್ಲಾಹಿಸ್ಸಾಲಿಹೀನ, ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹಿ."

[ನಮ್ಮ ಅಭಿವಂದನೆಗಳು, ನಮ್ಮ ಮಂಗಳ ಕಾರ್ಯಗಳು, ನಮ್ಮ ನಮಾಝ್‌ಗಳು ಮತ್ತು ಎಲ್ಲ ಪರಿಶುದ್ಧ ವಚನಗಳು ಅಲ್ಲಾಹನಿಗಾಗಿವೆ. ಓ ಪ್ರವಾದಿವರ್ಯರೇ! ತಮ್ಮ ಮೇಲೆ ಸಲಾಮ್, ಅಲ್ಲಾಹನ ದಯೆ ಮತ್ತು ಅವನ ಸಮೃದ್ಧಿಯಿರಲಿ. ನಮ್ಮ ಮೇಲೂ ಅಲ್ಲಾಹನ ಸಜ್ಜನ ದಾಸರ ಮೇಲೂ ಶಾಂತಿಯಿರಲಿ. ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂದೂ ಮತ್ತು ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿರುವರೆಂದೂ ನಾನು ಸಾಕ್ಷ್ಯವಹಿಸುತ್ತೇನೆ.]

ಇಲ್ಲಿ **'ಅಶ್‌ಹದು ಅಲ್ಲಾಇಲಾಹ'** ಎಂದು ಪಠಿಸುವಾಗ ಬಲ ತೊಡೆಯ ಮೇಲಿರುವ ಬಲಗೈಯ ತೋರ್ಬೆರಳನ್ನು ಬಿಡಿಸಿ ಮುಂದೆ ಚಾಚಬೇಕು. ಉಳಿದ ನಾಲ್ಕು ಬೆರಳುಗಳನ್ನು ಮಡಚಿಡಬೇಕು. **'ಇಲ್ಲಲ್ಲಾಹ್'** ಎಂದು ಹೇಳುವಾಗ ಆ

ತೋರು ಬೆರಳನ್ನು ಕೆಳಗೆ ಬಾಗಿಸಬೇಕು.

'ಅತ್ತಹಿಯ್ಯಾತ್'ನ ನಂತರ ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ಸಲಾತ್ ಹೇಳುವುದು ಕಡ್ಡಾಯ. ಅದು ಹೀಗಿದೆ:

اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا
صَلَّيْتَ عَلٰى اِبْرَاهِيمَ وَعَلٰى اٰلِ اِبْرَاهِيمَ وَبَارِكْ عَلٰى
مُحَمَّدٍ وَّ عَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيمَ
وَ عَلٰى اٰلِ اِبْرَاهِيمَ فِى الْعَالَمِينَ اِنَّكَ حَمِيدٌ مَّجِيدٌ۔

"ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್‌ರಾಹೀಮ ವ ಅಲಾ ಆಲಿ ಇಬ್‌ರಾಹೀಮ ವಬಾರಿಕ್ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್‌ರಾಹೀಮ ವಅಲಾ ಆಲಿ ಇಬ್‌ರಾಹೀಮ ಫಿಲ್ ಆಲಮೀನ ಇನ್ನಕ ಹಮೀದುಮ್ಮಜೀದ್."

[ಓ ಅಲ್ಲಾಹ್! ಮುಹಮ್ಮದ್(ಸ)ರ ಮೇಲೆ ಮತ್ತು ಅವರ ಅನುಯಾಯಿಗಳ ಮೇಲೆ ಅನುಗ್ರಹ ತೋರು. ಇಬ್‌ರಾಹೀಮ್(ಅ) ಮತ್ತು ಅವರ ಅನುಯಾಯಿಗಳ ಮೇಲೆ ನೀನು ಅನುಗ್ರಹ ತೋರಿದಂತೆ ಹಾಗೂ ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳಿಗೆ ಸಮೃದ್ಧಿ ನೀಡು. ಇಬ್‌ರಾಹೀಮ್(ಅ) ಮತ್ತು ಅವರ ಅನುಯಾಯಿಗಳಿಗೆ ನೀನು ಸಮೃದ್ಧಿ ನೀಡಿದಂತೆ. ಇಡೀ ವಿಶ್ವದಲ್ಲಿ ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಮಹಿಮಾವಂತನೂ ಆಗಿರುವೆ.]

ಅನಂತರ ಈ ಕೆಳಗಿನ ದುಆ(ಪ್ರಾರ್ಥನೆ)ಗಳ ಪೈಕಿ ಯಾವುದಾದರೊಂದನ್ನು ಪಠಿಸಬಹುದು-

اَللّٰهُمَّ اغْفِرْلِى مَا قَدَّمْتُ وَمَا اَخَّرْتُ وَمَا اَسْرَرْتُ وَمَآ اَعْلَنْتُ
وَمَا اَسْرَفْتُ وَمَآ اَنْتَ اَعْلَمُ بِهِ مِنِّى۔ اَنَّكَ اَنْتَ الْمُقَدِّمُ وَاَنْتَ الْمُؤَخِّرُ
لَآاِلٰهَ اِلَّا اَنْتَ۔ اَللّٰهُمَّ اِنِّى اَعُوذُ بِكَ مِنْ عَذَابِ الْقَبْرِ وَمِنْ عَذَابِ
النَّارِ وَمِنْ فِتْنَةِ الْمَحْيَا وَالْمَمَاتِ وَمِنْ فِتْنَةِ الْمَسِيحِ الدَّجَّالِ

1. ‘ಅಲ್ಲಾಹುಮ್ಮಗ್‌ಫಿರ್‌ಲೀ ಮಾಕದ್ದಮ್ತು ವಮಾ ಅಖ್ಖರ್ತು, ವಮಾ ಅಸ್ರರ್ತು ವಮಾ ಅಅ್‌ಲನ್ತು ವಮಾ ಅಸ್ರಫ್ತು ವಮಾ ಅಂತ ಅಅ್‌ಲಮು ಬಿಹಿಮಿನ್ನೀ ಇನ್ನಕ ಅಂತಲ್ ಮುಕದ್ದಿಮು ವ ಅಂತಲ್ ಮುಅಖ್ಖಿರು ಲಾ ಇಲಾಹ ಇಲ್ಲಾ ಅಂತ ಅಲ್ಲಾಹುಮ್ಮ ಇನ್ನೀ ಅಊದುಬಿಕ ಮಿನ್ ಅದಾಬಿಲ್ ಕಬ್ರಿ ವಮಿನ್ ಅದಾಬಿನ್ನಾರಿ ವಮಿನ್ ಫಿತ್ನತಿಲ್ ಮಹ್ಯಾ ವಲ್ ಮಮಾತಿ ವಮಿನ್ ಫಿತ್ನತಿಲ್ ಮಸೀಹಿದ್ದಜ್ಜಾಲ್."

"ಅಲ್ಲಾಹನೇ! ನಾನು ಹಿಂದೆ ಮಾಡಿದ, ಮುಂದೆ ಮಾಡಿದ, ಗುಪ್ತವಾಗಿ ಮಾಡಿದ, ಬಹಿರಂಗವಾಗಿ ಮಾಡಿದ, ನಾನು ಮೇರೆ ಮೀರಿ ಮಾಡಿದ, ನನಗಿಂತ ಹೆಚ್ಚು ನಿನಗೆ ತಿಳಿದಿರುವ ಸಕಲ ಪಾಪಗಳಿಂದಲೂ ನನ್ನನ್ನು ಕ್ಷಮಿಸು. ನಿಶ್ಚಯವಾಗಿಯೂ ನೀನೇ ಮುಂದೆ ಮಾಡುವವನೂ ಹಿಂದೆ ಮಾಡುವವನೂ ಆಗಿರುತ್ತಿ. ನೀನಲ್ಲದೆ ಯಾವ ಆರಾಧ್ಯನೂ ಇಲ್ಲ. ಅಲ್ಲಾಹನೇ! ನಾನು ಗೋರಿಯ ಶಿಕ್ಷೆಯಿಂದಲೂ ನರಕದ ಶಿಕ್ಷೆಯಿಂದಲೂ ಜೀವನ ಮತ್ತು ಮರಣದ ಪರೀಕ್ಷೆಗಳಿಂದಲೂ ದಜ್ಜಾಲನ ಕ್ಷೋಭೆಯಿಂದಲೂ ನಿನ್ನ ಅಭಯ ಯಾಚಿಸುತ್ತೇನೆ."

اَللّٰهُمَّ اِنِّى ظَلَمْتُ نَفْسِى ظُلْماً كَثِيرًا وَّلَا يَغْفِرُ الذُّنُوبَ
اِلَّا اَنْتَ فَاغْفِرْلِى مَغْفِرَةً مِّنْ عِنْدِكَ وَارْحَمْنِى اِنَّكَ اَنْتَ الْغَفُورُ الرَّحِيمُ

2. "ಅಲ್ಲಾಹುಮ್ಮ ಇನ್ನೀ ಝುಲಮ್ತು ನಫ್‌ಸೀ ಝುಲ್ಮನ್ ಕಸೀರನ್ ವಲಾ ಯಗ್ಫಿರುದ್ದುನೂಬ ಇಲ್ಲಾ ಅನ್ತ ಫಗ್‌ಫಿರ್‌ಲೀ ಮಗ್ಫಿರತನ್ ಮಿನ್ ಇಂದಿಕ ವರ್‌ಹಮ್ನೀ ಇನ್ನಕ ಅಂತಲ್ ಗಫೂರುರ್ರಹೀಮ್."



(ಓ ಅಲ್ಲಾಹ್! ನಾನು ನನ್ನ ಮೇಲೆಯೇ ಬಹಳ ಅಕ್ರಮವೆಸಗಿದ್ದೇನೆ. ನಿನ್ನ ಹೊರತು ಬೇರಾರೂ ಪಾಪಗಳನ್ನು ಕ್ಷಮಿಸುವವರಿಲ್ಲ. ಆದ್ದರಿಂದ ನೀನು ನಿನ್ನ ವತಿಯಿಂದ ನನ್ನನ್ನು ಕ್ಷಮಿಸಿಬಿಡು, ನನ್ನ ಮೇಲೆ ದಯೆ ತೋರು. ಖಂಡಿತವಾಗಿಯೂ ನೀನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುವೆ.)

ಅದಾದ ಬಳಿಕ اَلسَّلَامُ عَلَيْكُمْ وَرَحْمَةُ اللّٰهِ

"ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್" ಎನ್ನುತ್ತಾ ಮುಖವನ್ನು ಬಲಗಡೆಗೂ

اَلسَّلَامُ عَلَيْكُمْ وَرَحْمَةُ اللّٰهِ

"ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್" ಎನ್ನುತ್ತಾ ಎಡಗಡೆಗೂ ತಿರುಗಿಸಬೇಕು.

ಇಲ್ಲಿಗೆ ನಮಾಝ್ ಮುಕ್ತಾಯವಾಯಿತು.

ಈ ನಮಾಝ್‌ನ ಕ್ರಮವು ಎರಡು ರಕಅತ್ ಫರ್ಝ್ (ಕಡ್ಡಾಯ) ಆಗಿರುವ ಫಜ್ರ್ ನಮಾಝ್‌ನ ಕ್ರಮವಾಗಿದೆ. ಇನ್ನು ಮೂರು ಮತ್ತು ನಾಲ್ಕು ರಕಅತ್‌ಗಳಿರುವ ನಮಾಝ್‌ಗಳ (ಅರ್ಥಾತ್ ಮಗ್ರಿಬ್, ಝುಹರ್, ಅಸರ್ ಮತ್ತು ಇಶಾ) ಕ್ರಮದಲ್ಲಿ ಮೊದಲ ಎರಡು ರಕಅತ್‌ಗಳನ್ನು ಹಾಗೆಯೇ ನಿರ್ವಹಿಸಬೇಕು. ಆದರೆ 'ಅತ್ತಹಿಯ್ಯಾತ್'ನಲ್ಲಿ ಕುಳಿತಾಗ **"ಅಶ್‌ಹದು ಅನ್ನಮುಹಮ್ಮದರ್ರಸೂಲುಲ್ಲಾಹ್; ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದ್"** ಎಂಬಲ್ಲಿಯ ವರೆಗೆ ಮಾತ್ರ ಪಠಿಸಬೇಕು. ಅನಂತರ ಪುನಃ ಎದ್ದು ನಿಂತು ಒಂದು (ಮಗ್ರಿಬ್) ಅಥವಾ ಎರಡು (ಝುಹರ್, ಅಸರ್, ಇಶಾ) ರಕಅತ್‌ಗಳನ್ನು ನಿರ್ವಹಿಸಬೇಕು.

ಮಗ್ರಿಬ್ ಮತ್ತು ಇಶಾಗಳ ಮೊದಲ ಎರಡು ರಕಅತ್‌ಗಳಲ್ಲಿಯೂ ಫಜ್ರ್‌ನ ರಕಅತ್‌ಗಳಲ್ಲಿಯೂ ಕಿರಾಅತ್ ಮಧ್ಯಮ ಸ್ವರದಲ್ಲಿ ಪಠಿಸಬೇಕು. ಕೊನೆಯ ಒಂದು ಅಥವಾ ಎರಡು ರಕಅತ್‌ಗಳಲ್ಲಿ ಮೆಲುದನಿಯಲ್ಲಿ ಸೂರಃ ಫಾತಿಹಾ ಮಾತ್ರ ಓದಿದರೆ ಸಾಕು. ನಮಾಝ್ ಆದ ನಂತರ ಈ ದುಆ ಪಠಿಸಬೇಕು.

اَللّٰهُمَّ اَنْتَ السَّلَامُ وَمِنْكَ السَّلَامُ تَبَارَكْتَ يَاذَاالْجَلَالِ وَالْاِكْرَامِ۔
اَللّٰهُمَّ اَعِنِّى عَلٰى ذِكْرِكَ وَشُكْرِكَ وَحُسْنِ عِبَادَتِكَ۔ لَآ اِلٰهَ اِلَّااللّٰهُ وَحْدَهُ
لَا شَرِيكَ لَهُ، لَهُ الْمُلْكُ وَلَهُ الْحَمْدُ وَهُوَ عَلٰى كُلِّ شَيْءٍ قَدِيرٌ۔ اَللّٰهُمَّ
لَا مَانِعَ لِمَآ اَعْطَيْتَ وَلَا مُعْطِىَ لِمَا مَنَعْتَ وَلَا يَنْفَعُ ذَالْجَدِّ مِنْكَ الْجَدُّ

"ಅಲ್ಲಾಹುಮ್ಮ ಅಂತಸ್ಸಲಾಮ್ ವ ಮಿಂಕಸ್ಸಲಾಮ್ ತಬಾರಕ್ತ ಯಾ ದಲ್‌ಜಲಾಲಿ ವಲ್ ಇಕ್ರಾಮ್. ಅಲ್ಲಾಹುಮ್ಮ ಅಇನ್ನೀ ಅಲಾ ದಿಕ್ರಿಕ, ವಶುಕ್ರಿಕ ವಹುಸ್ನಿ ಇಬಾದತಿಕ.

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್. ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಅಅ್‌ತೈತ ವಲಾ ಮುಅ್‌ತಿಯ ಲಿಮಾ ಮನಅ್‌ತ ವಲಾ ಯಂಫಉ ದಲ್‌ಜದ್ದಿ ಮಿಂಕಲ್ ಜದ್ದ್."

(ಅಲ್ಲಾಹನೇ! ನೀನೇ ಶಾಂತಿ. ಶಾಂತಿಯು ನಿನ್ನಿಂದಲೇ ಇದೆ. ನೀನು ಅತ್ಯಂತ ಅನುಗ್ರಹವುಳ್ಳವನು. ಓ ಮಹಾಮಹಿಮನೇ, ಓ ಗೌರವಪೂರ್ಣನೇ! ಅಲ್ಲಾಹನೇ ನಿನ್ನ ದಿಕ್ರ್ (ಸ್ತುತಿ) ನಿನ್ನ ಶುಕ್ರ್ (ಕೃತಜ್ಞತೆ) ಮತ್ತು ನಿನ್ನನ್ನು ಉತ್ತಮ ರೀತಿಯಲ್ಲಿ ಆರಾಧನೆ ಮಾಡಲು ನನಗೆ ಸಹಾಯ ಮಾಡು. ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ. ಅವನು ಏಕಮಾತ್ರನು. ಸಕಲ ಸಾಮ್ರಾಜ್ಯವೂ ಸಕಲ ಸ್ತುತಿಸ್ತೋತ್ರಗಳೂ ಅವನಿಗೇ ಆಗಿವೆ ಮತ್ತು ಅವನು ಸಕಲ ಕಾರ್ಯಗಳಲ್ಲೂ ಸಾಮರ್ಥ್ಯವುಳ್ಳವನು. ಓ ಅಲ್ಲಾಹ್! ನೀನು ನೀಡಿದುದನ್ನು ತಡೆಯುವವರು ಯಾರೂ ಇಲ್ಲ. ನೀನು ನೀಡದುದನ್ನು ಕೊಡಿಸುವವರೂ ಯಾರೂ ಇಲ್ಲ. ಯಾವ ಹಣವಂತನಿಗೂ ಅವನ ಸಂಪತ್ತು ಮತ್ತು ಮೇಲ್ಮೆ ನಿನ್ನ ವಿರುದ್ಧ ಕಿಂಚಿತ್ತೂ ಪ್ರಯೋಜನ ನೀಡಲಾರದು.)

ಈ ದುಆಗಳಲ್ಲದೆ ಪವಿತ್ರ ಕುರ್‌ಆನಿನಲ್ಲಿರುವ ಅಥವಾ ಪ್ರವಾದಿಯವರು(ಸ) ಕಲಿಸಿದ ಯಾವುದೇ ದುಆಗಳನ್ನು ಪಠಿಸಬಹುದು. ಫಜ್ರ್ ನಮಾಝ್‌ನಲ್ಲಿ ಎರಡನೆಯ ರಕಅತ್‌ನ ರುಕೂಅ್‌ನಿಂದ ಎದ್ದು ನಿಂತು ದಿಕ್ರ್‌ಗಳನ್ನು ಪಠಿಸಿದ ಬಳಿಕ ಎರಡೂ ಕೈಗಳನ್ನು ಎತ್ತಿ ಈ ಕೆಳಗಿನ ದುಆ ಪಠಿಸಬೇಕು. ಅದಕ್ಕೆ 'ಕುನೂತ್' ಎಂದು ಹೆಸರು.

ಕುನೂತ್

اَللّٰهُمَّ اهْدِنِى فِى مَنْ هَدَيْتَ، وَعَافِنِى فِى مَنْ عَافَيْتَ، وَ تَوَلَّنِى فِى مَنْ تَوَلَّيْتَ، وَبَارِكْ لِى فِى مَآ اَعْطَيْتَ، وَقِنِى شَرَّ مَاقَضَيْتَ، فَاِنَّكَ تَقْضِى وَلَا يُقْضٰى عَلَيْكَ، اِنَّهُ لَا يَذِلُّ مَنْ وَّالَيْتَ، وَلَا يَعِزُّ مَنْ عَادَيْتَ تَبَارَكْتَ وَتَعَالَيْتَ وَصَلِّ عَلَى النَّبِىِّ مُحَمَّدٍ

"ಅಲ್ಲಾಹುಮ್ಮಹ್‌ದಿನೀ ಫೀಮನ್ ಹದೈತ, ವಆಫಿನೀ ಫೀಮನ್ ಆಫೈತ, ವತವಲ್ಲನೀ ಫೀಮನ್ ತವಲ್ಲೈತ, ವಬಾರಿಕ್ ಲೀ ಫೀಮಾ ಅಅ್‌ತೈತ, ವಕಿನೀ ಶರ್ರಮಾ ಕದೈತ, ಫಇನ್ನಕ ತಕ್‌ದೀ ವಲಾ ಯುಕ್‌ದಾ ಅಲೈಕ ಇನ್ನಹು ಲಾ ಯದಿಲ್ಲು ಮಂವ್ವಾಲೈತ, ವಲಾ ಯಇಝ್ಝು ಮನ್ ಆದೈತ. ತಬಾರಕ್ತ ವತಆಲೈತ ವಸಲ್ಲಿ

ಅಲನ್ನಬಿಯ್ಯಿ ಮುಹಮ್ಮದಿನ್."

[ಓ ಅಲ್ಲಾಹ್! ನೀನು ಸನ್ಮಾರ್ಗ ನೀಡಿದ ಜನರ ಜತೆಗೆ ನನಗೂ ಸನ್ಮಾರ್ಗ ನೀಡು. ನೀನು ಕ್ಷೇಮವನ್ನು ದಯಪಾಲಿಸಿದ ಜನರ ಜತೆಗೆ ನನಗೂ ಕ್ಷೇಮವನ್ನು ದಯಪಾಲಿಸು. ನೀನು ಸಂರಕ್ಷಕನಾದ ಜನರ ಜತೆಗೆ ನನ್ನ ಸಂರಕ್ಷಕನೂ ಆಗು. ನೀನು ನನಗೆ ದಯಪಾಲಿಸಿರುವ ಅನುಗ್ರಹಗಳಲ್ಲಿ ಸಮೃದ್ಧಿಯನ್ನು ನೀಡು. ನಿನ್ನ ವಿಧಿಯ ಕೇಡಿನಿಂದ ನನ್ನನ್ನು ರಕ್ಷಿಸು. ಏಕೆಂದರೆ ನೀನೇ ತೀರ್ಮಾನ ಮಾಡುವವನಾಗಿರುವಿ. ನಿನ್ನೆದುರು ಯಾರೂ ತೀರ್ಮಾನ ಮಾಡುವವರಿಲ್ಲ. ನೀನು ಯಾರ ರಕ್ಷಕನಾದೆಯೋ ಅವನೆಂದೂ ನಿಂದ್ಯನಾಗಲಾರನು. ನೀನು ಯಾರ ಶತ್ರುವಾದೆಯೋ ಅವನಿಗಾರೂ ಪ್ರತಾಪವನ್ನು ನೀಡಲಾರನು. ನೀನು ಮಂಗಳಮಯನು ಮತ್ತು ಉನ್ನತನು. ಪ್ರವಾದಿ ಮುಹಮ್ಮದ್‌ರ(ಸ) ಮೇಲೆ ಅನುಗ್ರಹ ತೋರು.]

ಜಮಾಅತ್ (ಸಾಮೂಹಿಕ) ನಮಾಝ್

ಫರ್ಝ್ (ಕಡ್ಡಾಯ) ನಮಾಝ್‌ಗಳನ್ನು ಸಾಮೂಹಿಕವಾಗಿ ನಿರ್ವಹಿಸಬೇಕಾದುದು ಮುಸ್ಲಿಮರ ಸಾಮೂಹಿಕ ಕರ್ತವ್ಯವಾಗಿದೆ. ಒಬ್ಬ ಇಮಾಮನ ಹಿಂದೆ ಮುಸ್ಲಿಮರೆಲ್ಲರೂ ಸಾಲುಗಟ್ಟಿ ನಿಂತು ನಮಾಝ್ ನಿರ್ವಹಿಸುವುದಕ್ಕೆ 'ಜಮಾಅತ್ ನಮಾಝ್' ಎಂದು ಹೆಸರು. ಒಂದು ಕಡೆ ಇಬ್ಬರೇ ವ್ಯಕ್ತಿಗಳಿದ್ದರೆ ಒಬ್ಬನು ಇಮಾಮ್ ಆಗಿಯೂ ಇನ್ನೊಬ್ಬನು ಮಅ್‌ಮೂಮ್ (ಇಮಾಮನನ್ನು ಯಥಾ ರೀತಿ ಅನುಕರಿಸುವವ) ಆಗಿಯೂ ನಮಾಝ್ ನಿರ್ವಹಿಸಬೇಕು. ಸಾಮೂಹಿಕ ನಮಾಝ್‌ಗೆ ವೈಯಕ್ತಿಕವಾಗಿ ನಮಾಝ್ ಮಾಡುವುದಕ್ಕಿಂತ 27 ಪಟ್ಟು ಅಧಿಕ ಪುಣ್ಯವಿದೆ. ಸಾಮೂಹಿಕ ನಮಾಝ್‌ನ ನಿಯಮ-ನಿಬಂಧನೆಗಳು ಈ ಕೆಳಗಿನಂತಿವೆ:

1. ಸಾಮೂಹಿಕ ನಮಾಝ್‌ನಲ್ಲಿ ಭಾಗವಹಿಸುವವರು ಸಾವಧಾನದಿಂದಲೇ ನಡೆದುಕೊಂಡು ಬರಬೇಕು. ಓಡಿಕೊಂಡು ಬರಬೇಕಾಗಿಲ್ಲ.

2. ಸಾಮೂಹಿಕ ನಮಾಝ್ ಆರಂಭವಾಗುವಾಗಲೇ ಅಂದರೆ ಇಮಾಮ್ ಪ್ರಥಮ ತಕ್‌ಬೀರ್ ಹೇಳುವಾಗಲೇ ಸೇರುವುದು ಉತ್ತಮ. ಆದರೆ ಅದು ಅಸಾಧ್ಯವಾದಲ್ಲಿ ಜಮಾಅತ್‌ನಲ್ಲಿ ಯಾವಾಗ ಸೇರಿದರೂ ಸಾಮೂಹಿಕ ನಮಾಝ್‌ನ ಪುಣ್ಯ ಲಭಿಸುವುದು.

3. ಮಅ್‌ಮೂಮ್ ಒಬ್ಬನೇ ಇದ್ದರೆ ಇಮಾಮನ ಬಲಭಾಗದಲ್ಲಿ ಸ್ವಲ್ಪ ಹಿಂದೆ ನಿಲ್ಲಬೇಕು. ಇನ್ನೊಬ್ಬನು ಬಂದರೆ ಇಮಾಮನ ಎಡಭಾಗದಲ್ಲಿ ನಿಲ್ಲಬೇಕು. ಅನಂತರ ಇಬ್ಬರೂ ಒಟ್ಟಿಗೆ ಹಿಂದೆ ಸರಿದು ಭುಜಕ್ಕೆ ಭುಜ ತಾಗಿಸಿ ನಿಲ್ಲಬೇಕು.

ಒಂದು ವೇಳೆ ಹಿಂದೆ ಸರಿಯಲು ಸ್ಥಳಾವಕಾಶವಿಲ್ಲದಿದ್ದರೆ ಇಮಾಮನೇ ಮುಂದಡಿಯಿಟ್ಟು ಸ್ಥಳಾವಕಾಶ ಮಾಡಿಕೊಡಬೇಕು.

4. ಮಅ್‌ಮೂಮನು ಇಮಾಮ್‌ನ ಚಲನೆಗಿಂತ ಮುಂದಿರಬಾರದು. ಇಮಾಮನನ್ನು ಯಥಾ ಪ್ರಕಾರ ಅನುಕರಿಸಬೇಕು. ಉದಾ: ಇಮಾಮ್ ನಿಂತುಕೊಂಡು ಓದುತ್ತಿರುವಾಗ ಮಅ್‌ಮೂಮ್ ರುಕೂಅ್ ಮಾಡಬಾರದು. ರುಕೂಅ್, ಸುಜೂದ್‌ಗಳಲ್ಲಿರುವಾಗ ಇಮಾಮ್‌ಗಿಂತ ಮುಂಚೆ ತಲೆ ಎತ್ತಬಾರದು. ಇಮಾಮ್ ಸಲಾಮ್ ಹೇಳುವುದಕ್ಕಿಂತ ಮುಂಚೆ ಮಅ್‌ಮೂಮ್ ಸಲಾಮ್ ಹೇಳಬಾರದು. ಹಾಗೆ ಮಾಡುವುದು ದೊಡ್ಡ ತಪ್ಪು. ಅಂಥವನು ಕಿಯಾಮತ್ (ನಿರ್ಣಾಯಕ) ದಿನದಂದು ಕತ್ತೆಯ ರೂಪದಲ್ಲಿ ಎಬ್ಬಿಸಲ್ಪಡುವನೆಂದು ಪ್ರವಾದಿ ಮುಹಮ್ಮದ್(ಸ) ಹೇಳಿದ್ದಾರೆ.

5. ಸಾಲಿನಲ್ಲಿಯೂ ಮಅ್‌ಮೂಮನು ಇಮಾಮ್‌ಗಿಂತ ಮುಂದೆ ನಿಲ್ಲಬಾರದು. ಒಂದನೆಯ ಸಾಲು ಪೂರ್ತಿಗೊಂಡ ಬಳಿಕವೇ ಹಿಂದಿನ ಸಾಲು ಆರಂಭಿಸಬೇಕು. ಮುಂದಿನ ಸಾಲಿನಲ್ಲಿ ಸ್ಥಳಾವಕಾಶವಿದ್ದರೆ ಹಿಂದಿನ ಸಾಲಿನಲ್ಲಿ ನಿಲ್ಲುವುದು ಸರಿಯಲ್ಲ.

6. ನಮಾಝ್‌ನ ಮಧ್ಯದಲ್ಲಿ ಯಾರಾದರೂ ಸಾಮೂಹಿಕ ನಮಾಝ್‌ಗಾಗಿ ಬಂದರೆ, ಆಗ ಇಮಾಮನು ಯಾವ ಅವಸ್ಥೆಯಲ್ಲಿರುವನೋ ಅದೇ ಅವಸ್ಥೆಯಲ್ಲಿ ಸೇರಬೇಕು. ಉದಾ: ಇಮಾಮ್ ರುಕೂಅ್‌ನಲ್ಲಿರುವಾಗ ಮಅ್‌ಮೂಮನು ಕೈಕಟ್ಟಿ ಕಿರಾಅತ್ ಪಠಿಸಬಾರದು. ರುಕೂಅ್‌ಗೆ ಸೇರಬೇಕು. ಸುಜೂದ್‌ನಲ್ಲಿದ್ದರೆ ಸುಜೂದ್‌ನಲ್ಲೂ ಅತ್ತಹಿಯ್ಯಾತ್‌ಗೆ ಕುಳಿತಿದ್ದರೆ ಅದೇ ಅವಸ್ಥೆಯಲ್ಲೂ ಸೇರಬೇಕು. ಇಮಾಮ್ ಸಲಾಮ್ ಹೇಳಿ ನಮಾಝ್‌ನಿಂದ ಮುಕ್ತನಾದ ಬಳಿಕ ಮಅ್‌ಮೂಮನು ಬಿಟ್ಟು ಹೋದ ರಕಅತ್‌ಗಳನ್ನು ಪೂರ್ತಿಗೊಳಿಸಬೇಕು.

7. ಇಮಾಮ್ ಸೂರಃ ಫಾತಿಹಾ ಓದಿದ ನಂತರ ಇಮಾಮ್‌ನ ಹಿಂದೆ ನಿಂತಿರುವವರು 'ಆಮೀನ್' ಎಂದು ಹೇಳಬೇಕು. ಅನಂತರ ಮೌನವಾಗಿ ಸೂರಃ ಫಾತಿಹಾ ಓದಬೇಕು.

8. ಒಬ್ಬನು ಇಮಾಮನ ಜೊತೆ ರುಕೂಅ್‌ನಲ್ಲಿ ಸೇರಿ ಸ್ವಲ್ಪ ತಂಗಲು ಅವಕಾಶ ಸಿಕ್ಕಿದರೆ ಅವನಿಗೆ ಆ ರಕಅತ್ ಸಿಕ್ಕಿದಂತಾಗುವುದು. ರುಕೂಅ್‌ಗೆ ಹೋಗುವಾಗಲೇ ಇಮಾಮ್ ತಲೆಯೆತ್ತಿದರೆ ಅದು ಸಿಕ್ಕಿದಂತಾಗುವುದಿಲ್ಲ.

9. ಇಮಾಮನು ಸಾಮೂಹಿಕ ನಮಾಝ್‌ನಲ್ಲಿ ಮಅ್‌ಮೂಮರಿಗಿಂತ ಎತ್ತರದಲ್ಲಿ ನಿಲ್ಲಬಾರದು. ಆದರೆ ಮಅ್‌ಮೂಮರು ಎತ್ತರದಲ್ಲಿ ನಿಲ್ಲುವುದರಲ್ಲಿ ಆಕ್ಷೇಪವಿಲ್ಲ.

10. ನಮಾಝ್ ನಡೆಯುತ್ತಿರುವಾಗ ಇಮಾಮನಿಗೇನಾದರೂ ತೊಂದರೆ

ಯುಂಟಾಗಿ ಆತನು ನಮಾಝ್ ಮಾಡಿಸುವ ಸ್ಥಿತಿಯಲ್ಲಿಲ್ಲದಿದ್ದರೆ, ಅರ್ಥಾತ್ ಅವನ ವುಝೂ ಭಂಗವಾದರೆ ಅಥವಾ ತನಗೆ ವುಝೂ ಇರಲಿಲ್ಲವೆಂದು ಅವನಿಗೆ ನೆನಪಾದರೆ, ತನ್ನ ಹಿಂದೆ ಮೊದಲ ಸಾಲಿನಲ್ಲಿರುವವರ ಪೈಕಿ ಒಬ್ಬನನ್ನು ಕೈಹಿಡಿದು ಮುಂದೆ ನಿಲ್ಲಿಸಬೇಕು. ಅವನು ಇಮಾಮ್ ಆಗಿ ನಮಾಝ್ ಪೂರ್ತಿಗೊಳಿಸಬೇಕು.

11. ಇಮಾಮನ ತಕ್ಬೀರ್‌ಗಳು (**ಅಲ್ಲಾಹು ಅಕ್ಬರ್**) ಹಿಂದೆ ಇರುವವರಿಗೆ ಕೇಳುವಂತಾಗಬೇಕು. ಇಮಾಮನ ಶಬ್ದ ಹಿಂದಿನ ಸಾಲುಗಳಲ್ಲಿರುವವರಿಗೆ ಕೇಳದಿದ್ದರೆ, ಒಬ್ಬನು **'ಮುಕಬ್ಬರ್'** ಆಗಿ ಇಮಾಮನಂತೆಯೇ ಜೋರಾಗಿ ತಕ್ಬೀರ್ ಹೇಳಬೇಕು.

12. ಇಮಾಮ್ ಕುರ್‌ಆನ್ ಪಠಿಸುವಾಗ ಏನಾದರೂ ತಪ್ಪಿದರೆ ಮಅ್‌ಮೂಮರ ಪೈಕಿ ತಿಳಿದಿರುವವರು ತಿದ್ದಿ ಹೇಳಿಕೊಡಬೇಕು.

13. ಇಮಾಮ್ ಯಾವುದಾದರೂ ಕ್ರಿಯೆಯನ್ನು ಮಾಡುವಾಗ ತಪ್ಪಿದರೆ ಉದಾ: ರುಕೂಅ್‌ನ ಬದಲಿಗೆ ಸುಜೂದ್‌ಗೆ ಹೋದರೆ, ಅತ್ತಹಿಯ್ಯಾತ್‌ಗೆ ಕುಳಿತು ಕೊಳ್ಳುವ ಬದಲು ಎದ್ದು ನಿಂತರೆ, ಎರಡನೆಯ ಅಥವಾ ನಾಲ್ಕನೆಯ ರಕಅತ್‌ಗಾಗಿ ಎದ್ದು ನಿಲ್ಲುವ ಬದಲು ಕುಳಿತುಬಿಟ್ಟರೆ ಮಅ್‌ಮೂಮರ ಪೈಕಿ ಯಾರಾದರೂ **'ಸುಬ್‌ಹಾನಲ್ಲಾಹ್'** (ಅಲ್ಲಾಹು ಪರಿಶುದ್ಧನು) ಎಂದು ಹೇಳಬೇಕು.

14. ಇಮಾಮನು ಯಾವುದೇ ಶರತ್ತು ಅಥವಾ ಫರ್ಳನ್ನು ಬಿಟ್ಟು ನಮಾಝ್ ಮಾಡಿಸಿದರೆ ಮತ್ತು ಅದು ಮಅ್‌ಮೂಮರಿಗೆ ತಿಳಿದಿರದಿದ್ದರೆ, ಅವರ ನಮಾಝ್ ಸಿಂಧುವಾಗುತ್ತದೆ. ಆದರೆ ಇಮಾಮನ ನಮಾಝ್ ಮಾತ್ರ ಸಿಂಧುವಾಗುವುದಿಲ್ಲ.

15. ಇಮಾಮ್ ಮತ್ತು ಮಅ್‌ಮೂಮರ ಮಧ್ಯೆ ಏನಾದರೂ ತಡೆಯಿದ್ದರೆ (ಉದಾ: ಗೋಡೆ, ತಟ್ಟಿ ಇತ್ಯಾದಿ) ಮತ್ತು ಇಮಾಮನು ತಕ್‌ಬೀರ್ ಹೇಳುವುದನ್ನು ಮಅ್‌ಮೂಮರು ಕೇಳುತ್ತಿದ್ದರೆ ಅಥವಾ ಇಮಾಮನನ್ನು ಅವರು ಕಾಣುತ್ತಿದ್ದರೆ, ಆಗ ಆ ನಮಾಝ್ ಸಿಂಧುವಾಗುತ್ತದೆ.

16. ಸಾಮೂಹಿಕ ನಮಾಝ್ ನಡೆಯುತ್ತಿರುವಾಗ ಒಬ್ಬನು ಬೇರೆಯೇ ಆಗಿ ನಮಾಝ್ ಮಾಡಬಾರದು. ಹಾಗೆ ಮಾಡಿದರೆ ಅಂತಹವನ ನಮಾಝ್, ನಮಾಝ್ ಎನಿಸುವುದೇ ಇಲ್ಲ.

17. ಫಾಸಿಕ್ ಮತ್ತು ಫಾಜಿರ್ (ಕರ್ಮಭ್ರಷ್ಟ ಮತ್ತು ಪಾಪಿ) ಅಲ್ಲದವನನ್ನು ಇಮಾಮ್ ಆಗಿ ನೇಮಿಸಬೇಕಾದುದು ಮುಸ್ಲಿಮರ ಸಾಮೂಹಿಕ ಕರ್ತವ್ಯವಾಗಿದೆ. ಒಂದು ವೇಳೆ ಓರ್ವ ಇಮಾಮನು ಅಂತಹ ಗುಣವುಳ್ಳವನಾದರೂ ಅವನೊಂದಿಗೆ ಮಾಡುವ ನಮಾಝ್ ಸಿಂಧುವಾಗುತ್ತದೆ. ಏಕೆಂದರೆ ಅವನ ಕರ್ಮಭ್ರಷ್ಟತೆ ಮತ್ತು ಪಾಪಕ್ಕೆ ಅವನೇ ಹೊಣೆಗಾರನು; ಇತರ ನಮಾಝಿಗಳಲ್ಲ.

ಸುನ್ನತ್ ನಮಾಝ್‌ಗಳು

ದಿನದ ಐದು ಹೊತ್ತಿನ ಕಡ್ಡಾಯ ನಮಾಝ್‌ಗಳ ಹೊರತಾಗಿ ಕೆಲವು ಸುನ್ನತ್ ನಮಾಝ್‌ಗಳನ್ನು ನಿರ್ವಹಿಸುವಂತೆ ಪ್ರವಾದಿ(ಸ) ಆಜ್ಞಾಪಿಸಿದ್ದಾರೆ. ಅವುಗಳಿಗೆ ಕಡ್ಡಾಯ ನಮಾಝ್‌ನ ಸ್ಥಾನವಿಲ್ಲವಾದರೂ ಅವುಗಳನ್ನು ನಿರ್ವಹಿಸುವವರಿಗೆ ಬಹಳ ಪುಣ್ಯವಿರುವುದು. ಕಡ್ಡಾಯ ನಮಾಝ್‌ಗಳಲ್ಲಿ ಸಂಭವಿಸಿರಬಹುದಾದಂತಹ ಲೋಪದೋಷಗಳನ್ನು ಅವು ಅಳಿಸುವುವು.

1. **ರವಾತಿಬ್ ಸುನ್ನತ್:** ಫರ್ಝ್ ನಮಾಝ್‌ಗಳ ಜೊತೆಯಲ್ಲಿ ಮಾಡುವ ನಮಾಝ್. ಇದು ಒಟ್ಟು 10 ರಕಅತ್‌ಗಳಾಗಿವೆ. ಈ ಪೈಕಿ ಫಜ್ರ್ ನಮಾಝ್‌ಗಿಂತ ಮುಂಚೆ ಎರಡು ರಕಅತ್, ಝುಹ್ರ್ ನಮಾಝ್‌ಗಿಂತ ಮುಂಚೆ ಎರಡು ಮತ್ತು ನಂತರ ಎರಡು ರಕಅತ್, ಮಗ್ರಿಬ್ ಮತ್ತು ಇಶಾ ನಮಾಝ್‌ಗಳ ನಂತರ ಎರಡೆರಡು ರಕಅತ್‌ಗಳು. ಈ ನಮಾಝ್ ವೈಯಕ್ತಿಕವಾಗಿಯೇ ಮಾಡಲಾಗುವುದು.

2. **ತರಾವೀಹ್:** ಇದು ರಮಝಾನ್ ತಿಂಗಳಲ್ಲಿ ಇಶಾ ನಮಾಝ್‌ನ ನಂತರ ಎರಡೆರಡು ರಕಅತ್‌ಗಳಂತೆ ಮಾಡುವ ನಮಾಝ್. ಇದನ್ನು ಸಾಮೂಹಿಕವಾಗಿ ಮಾಡುವುದರಲ್ಲಿ ಬಹಳ ಪುಣ್ಯವಿದೆ. ಇದು 20 ರಕಅತ್ ಆಗಿವೆ.

3. **ಈದ್ ನಮಾಝ್:** ಇದು ಎರಡು ಹಬ್ಬಗಳಂದು ನಿರ್ವಹಿಸಲಾಗುವ ನಮಾಝ್. ಈ ಪೈಕಿ ಒಂದನೆಯದು, ಶವ್ವಾಲ್ ತಿಂಗಳ ಪ್ರಥಮ ದಿನಾಂಕ ಅರ್ಥಾತ್, ರಮಝಾನ್ ತಿಂಗಳ ಉಪವಾಸದ ಮರುದಿನ ಆಚರಿಸುವ **'ಈದುಲ್ ಫಿತರ್'** (ಇದು ಹಬ್ಬದ ದಿನದಂದು ಸೂರ್ಯೋದಯವಾದ ಸ್ವಲ್ಪ ಹೊತ್ತಿನ ನಂತರ ಎರಡು ರಕಅತ್ ಸಾಮೂಹಿಕವಾಗಿ ನಿರ್ವಹಿಸಲಾಗುವ ನಮಾಝ್). ಎರಡನೆಯದು ದುಲ್‌ಹಜ್ಜ್ ತಿಂಗಳ ಹತ್ತನೆಯ ದಿನಾಂಕ ಆಚರಿಸಲಾಗುವ **'ಈದುಲ್ ಅಝ್‌ಹಾ'** ಹಬ್ಬದ ದಿನದಂದು ಅದೇ ಹೊತ್ತಿನಲ್ಲಿ ನಿರ್ವಹಿಸಲಾಗುವ ನಮಾಝ್. ಒಂದನೆಯ ರಕಅತ್‌ನಲ್ಲಿ ತಕ್ಬೀರ್ ತಹ್ರೀಮದ ನಂತರ ಏಳು ಬಾರಿ ಮತ್ತು ಎರಡನೆಯ ರಕಅತ್‌ನಲ್ಲಿ ಐದು ಬಾರಿ ತಕ್ಬೀರ್‌ಗಳನ್ನು ಹೇಳುತ್ತಾ ಕೈಕಟ್ಟಬೇಕು. ಈ ಹೆಚ್ಚುವರಿ ತಕ್ಬೀರ್‌ಗಳ ಮಧ್ಯೆ ಈ ಕೆಳಗಿನ ತಸ್ಬೀಹ್ ಹೇಳಬೇಕು.

سُبْحَانَ اللهِ وَالْحَمْدُ لِلّٰهِ وَلَا اِلٰهَ اِلَّا اللهُ وَاللهُ اَكْبَر

"ಸುಬ್‌ಹಾನಲ್ಲಾಹಿ ವಲ್‌ಹಮ್ದುಲಿಲ್ಲಾಹಿ ವಲಾಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್."

(ಅಲ್ಲಾಹನು ಪರಮ ಪಾವನನು ಮತ್ತು ಸರ್ವಸ್ತುತಿಸ್ತೋತ್ರಗಳೂ ಅಲ್ಲಾಹನಿಗೇ

ಮೊಸಲು. ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಅಲ್ಲಾಹನು ಅತಿ ದೊಡ್ಡವನು.)

ಈ ಎರಡೂ ನಮಾಝ್‌ಗಳ ಬಳಿಕ ಇಮಾಮರು ಖುತ್ಬಾ ನಿರ್ವಹಿಸುತ್ತಾರೆ.

4. **ಗ್ರಹಣ ನಮಾಝ್:** ಇದು ಸೂರ್ಯ ಅಥವಾ ಚಂದ್ರಗ್ರಹಣದ ವೇಳೆ ಮಾಡುವ ಎರಡು ರಕಅತ್ ನಮಾಝ್. ಈ ನಮಾಝ್‌ನ ಪ್ರತಿಯೊಂದು ರಕಅತ್‌ನಲ್ಲಿ ಎರಡು ರುಕೂಅ್ ಮಾಡಲಾಗುವುದು. ಇದನ್ನು ಸಾಮೂಹಿಕವಾಗಿ ನಿರ್ವಹಿಸುವುದು ಉತ್ತಮ. ಇದರಲ್ಲಿ ಪ್ರತಿಯೊಂದು ರಕಅತ್‌ನಲ್ಲಿ ಸೂರಃ ಫಾತಿಹಾದ ನಂತರ ಪವಿತ್ರ ಕುರ್‌ಆನಿನ ಯಾವುದಾದರೂ ಭಾಗವನ್ನು ಮಧ್ಯಮ ಸ್ವರದಲ್ಲಿ ಓದಬೇಕು. ನಮಾಝ್ ಮುಗಿದ ಕೂಡಲೇ ಇಮಾಮ್ ಖುತ್ಬಾ ನಿರ್ವಹಿಸಬೇಕು.

5. **ಇಸ್ತಿಸ್ಕಾ ಅಥವಾ ಮಳೆಗಾಗಿ ಪ್ರಾರ್ಥಿಸುವ ನಮಾಝ್:** ಇದು ಮಳೆಯಿಲ್ಲದೆ ಜನರು ಸಂಕಷ್ಟಕ್ಕೆ ಗುರಿಯಾದಾಗ ಮಳೆಗಾಗಿ ಪ್ರಾರ್ಥಿಸುವ ಎರಡು ರಕಅತ್ ಸಾಮೂಹಿಕ ನಮಾಝ್. ಇದಾದ ಕೂಡಲೇ ಇಮಾಮ್ ಖುತ್ಬಾ ನಿರ್ವಹಿಸುವರು.

ಇದರಲ್ಲಿ ಜನರೆಲ್ಲರೂ ಒಂದು ಮೈದಾನ ಅಥವಾ ಮಸೀದಿಯಲ್ಲಿ ಸೇರಿ, ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಅಲ್ಲಾಹನತ್ತ ಮರಳಿ ಸಾಮೂಹಿಕವಾಗಿ ನಮಾಝ್ ನಿರ್ವಹಿಸುತ್ತಾರೆ.

ನಮಾಝ್ ಮತ್ತು ಖುತ್ಬಾ ಆದ ಕೂಡಲೇ ಇಮಾಮ್ ಸಹಿತ ಎಲ್ಲರೂ ಕಿಬ್ಲಾಭಿಮುಖವಾಗಿ ಕೈಯೆತ್ತಿ ಕರುಣಾಸಾಗರನಾದ ಅಲ್ಲಾಹನಲ್ಲಿ ಮಳೆ ಸುರಿಸುವಂತೆ ಪ್ರಾರ್ಥಿಸಬೇಕು.

6. **ತಹಜ್ಜುದ್:** ಇದು ರಾತ್ರಿ ನಿದ್ದೆಯಿಂದೆದ್ದು ನಿರ್ವಹಿಸಲಾಗುವ ಐಚ್ಛಿಕ ನಮಾಝ್. ರಾತ್ರಿಯ ಅಂತ್ಯಜಾವವು ಇದಕ್ಕೆ ಅತ್ಯಂತ ಸೂಕ್ತ ಸಮಯ. ಇದು ಸುನ್ನತ್ ನಮಾಝ್‌ಗಳ ಪೈಕಿ ಅತ್ಯಂತ ಶ್ರೇಷ್ಠ ಹಾಗೂ ಪುಣ್ಯದಾಯಕ ನಮಾಝ್ ಆಗಿದೆ. ಕನಿಷ್ಠ ಎರಡು ರಕಅತ್ ಆದರೂ ನಿರ್ವಹಿಸಬೇಕು.

7. **ವಿತ್ರ್:** ಇದು ರಾತ್ರಿ ಕಾಲದ ಕೊನೆಯ ಐಚ್ಛಿಕ ನಮಾಝ್. ಒಂದೇ ರಕಅತ್ ನಿರ್ವಹಿಸಿದರೂ ಸಾಕಾಗುತ್ತದೆ. ಆದರೆ ಕನಿಷ್ಠ ಮೂರು ರಕಅತ್ ಮಾಡುವುದು ಸುನ್ನತ್‌ಗೆ ಅನುಗುಣವಾಗಿದೆ. ಮೊದಲು ಎರಡು ರಕಅತ್ ನಮಾಝ್ ಮಾಡಿ ಸಲಾಮ್ ಹೇಳಬೇಕು. ಅನಂತರ ಒಂದು ರಕಅತ್ ಮಾಡಬೇಕು. ವಿತ್ರ್ ನಮಾಝ್‌ಗಳಲ್ಲಿ ಐದು, ಏಳು, ಒಂಭತ್ತು ಅಥವಾ ಹನ್ನೊಂದು ರಕಅತ್‌ಗಳನ್ನು ಕೂಡಾ ನಿರ್ವಹಿಸಬಹುದು. ಆಗ ಎರಡೆರಡು ರಕಅತ್ ನಮಾಝ್ ನಿರ್ವಹಿಸಿ ಸಲಾಮ್ ಹೇಳಬೇಕು. ಕೊನೆಯಲ್ಲಿ ಒಂದು

ರಕಅತ್ ಮಾಡಬೇಕು. ರಮಝಾನ್ ತಿಂಗಳಲ್ಲಿ ವಿತ್ರ್ ನಮಾಝ್ ಸಾಮೂಹಿಕವಾಗಿ ನಿರ್ವಹಿಸುವುದು ಸುನ್ನತ್ ಆಗಿದೆ.

ವಿತ್ರ್ ನಮಾಝ್‌ನಲ್ಲಿ ಪ್ರತಿ ರಕಅತ್‌ನಲ್ಲಿ ಸೂರಃ ಫಾತಿಹಾದ ಬಳಿಕ ಪವಿತ್ರ ಕುರ್‌ಆನಿನ ಯಾವುದಾದರೂ ಭಾಗವನ್ನು ಓದಬಹುದು. ಆದರೆ ಮೊದಲ ರಕಅತ್‌ನಲ್ಲಿ **'ಅಲ್ ಅಅ್‌ಲಾ'**, ಎರಡನೆಯ ರಕಅತ್‌ನಲ್ಲಿ **'ಅಲ್ ಕಾಫಿರೂನ್'** ಎಂಬ ಅಧ್ಯಾಯಗಳನ್ನೂ ಕೊನೆಯ ರಕಅತ್‌ನಲ್ಲಿ ಪವಿತ್ರ ಕುರ್‌ಆನಿನ ಕೊನೆಯ ಮೂರು ಅಧ್ಯಾಯಗಳನ್ನು ಒಟ್ಟಾಗಿಯೂ ಪಠಿಸುವುದು ಸುನ್ನತ್ ಆಗಿದೆ.

ಸಹ್‌ವಿನ ಅಥವಾ ಮರೆವಿನ ಸುಜೂದ್

ನಮಾಝ್‌ನಲ್ಲಿ ಯಾವುದಾದರೂ ಫರ್ಝ್ (ಕಡ್ಡಾಯ) ಕ್ರಿಯೆಯನ್ನು ಉದ್ದೇಶಪೂರ್ವಕವಾಗಿ ತೊರೆದರೆ ನಮಾಝ್ ಆಗುವುದೇ ಇಲ್ಲ. ಆದರೆ ಮರೆತು ಹೋದರೆ ಅದಕ್ಕೆ ಪ್ರಾಯಶ್ಚಿತ್ತವೆಂಬಂತೆ ನಮಾಝ್‌ನ ಕೊನೆಯಲ್ಲಿ ಸಲಾಮ್ ಹೇಳುವುದಕ್ಕೆ ಮುಂಚೆ ಎರಡು ಸುಜೂದ್ ಮಾಡಬೇಕು. ಅದಕ್ಕೆ 'ಸಹ್‌ವಿನ ಸುಜೂದ್' ಎಂದು ಹೆಸರು.

ಒಬ್ಬನು ಮರೆವಿನಿಂದ ಎರಡು ಸಲ ರುಕೂಅ್ ಮಾಡಿದರೆ ಅಥವಾ 4 ರಕಅತ್‌ನ ಬದಲು 5 ರಕಅತ್ ನಮಾಝ್ ಮಾಡಿದರೆ ಅವನು 'ಸಹ್‌ವಿನ ಸುಜೂದ್' ಮಾಡುವುದು ಸುನ್ನತ್ ಆಗಿದೆ.

ಒಬ್ಬನಿಗೆ ನಮಾಝ್‌ನ ಕೊನೆಯಲ್ಲಿ ತಾನು 4 ರಕಅತ್ ನಿರ್ವಹಿಸಿರುವೆನೋ 3 ರಕಅತ್ ನಿರ್ವಹಿಸಿರುವೆನೋ ಎಂಬ ಸಂದೇಹ ಮೂಡಿದರೆ ಅವನು ಒಂದು ರಕಅತ್ ನಿರ್ವಹಿಸಬೇಕಾದುದು ಕಡ್ಡಾಯ ಮತ್ತು ಕೊನೆಯಲ್ಲಿ 'ಸಹ್‌ವಿನ ಸುಜೂದ್' ಮಾಡುವುದು ಸುನ್ನತ್ ಆಗಿದೆ.

ಇನ್ನು ಒಬ್ಬನು ಮೊದಲಿನ 'ಅತ್ತಹಿಯ್ಯಾತ್'ಗಾಗಿ ಬೇಕಂತಲೇ ಕುಳಿತುಕೊಳ್ಳದೆ ನಮಾಝ್ ನಿರ್ವಹಿಸಿದರೆ ಅವನ ನಮಾಝ್ ಅಸಿಂಧುವಾಗುವುದಿಲ್ಲ. ಆದರೂ ಕೊನೆಯಲ್ಲಿ ಸಹ್‌ವಿನ ಸುಜೂದ್ ಮಾಡಬೇಕು. ಅದು ಸುನ್ನತ್ ಆಗಿದೆ. ಈ ಸುಜೂದ್‌ನಲ್ಲಿ–

سُبْحَانَ مَنْ لَا يَنَامُ وَلَا يَسْهُو

"ಸುಬ್‌ಹಾನ ಮನ್ ಲಾ ಯನಾಮು ವಲಾ ಯಸ್‌ಹೂ" (ನಿದ್ದೆಯೂ ಮರವೆಯೂ ಇಲ್ಲದ ಅಲ್ಲಾಹನು ಪರಿಶುದ್ಧನು.) ಎಂದು ಹೇಳಬೇಕು.

ತಿಲಾವತ್‌ನ ಸುಜೂದ್

ಪವಿತ್ರ ಕುರ್‌ಆನಿನಲ್ಲಿ 15 ಕಡೆಗಳಲ್ಲಿ ಸುಜೂದ್ ಮಾಡುವಂತಹ ಸೂಕ್ತಗಳಿವೆ. ಕುರ್‌ಆನ್ ಪಾರಾಯಣ ಮಾಡುವಾಗ ಅಂತಹ ಸೂಕ್ತ ಬಂದರೆ ಒಂದು 'ಸುಜೂದ್' (ಸಾಷ್ಟಾಂಗ) ಮಾಡುವುದು ಸುನ್ನತ್ ಆಗಿದೆ. ನಮಾಝ್‌ನಲ್ಲೂ ಕುರ್‌ಆನ್ ಪಠಿಸುತ್ತಿರುವಾಗ ಅಂತಹ ಸ್ಥಳಗಳಲ್ಲಿ ಸುಜೂದ್ ಮಾಡಬಹುದಾಗಿದೆ. ಅದಕ್ಕೆ 'ತಿಲಾವತ್‌ನ ಸುಜೂದ್' ಎಂದು ಹೆಸರು. ಅದರಲ್ಲಿ ಈ ತಸ್ಬೀಹ್ ಪಠಿಸಬೇಕು.

سَجَدَ وَجْهِيَ لِلَّذِي خَلَقَهُ وَصَوَّرَهُ وَشَقَّ سَمْعَهُ

وَبَصَرَهُ بِحَوْلِهِ وَقُوَّتِهِ فَتَبَارَكَ اللّٰهُ اَحْسَنُ الْخَالِقِيْنَ

"ಸಜದ ವಜ್‌ಹಿಯ ಲಿಲ್ಲದೀ ಖಲಕಹೂ ವಸವ್ವರಹೂ ವಶಕ್ಕ ಸಮ್‌ಅಹೂ ವ ಬಸರಹೂ ಬಿಹೌಲಿಹೀ ವ ಕುವ್ವತಿಹೀ ಫತಬಾರಕಲ್ಲಾಹು ಅಹ್ಸನುಲ್ ಖಾಲಿಕೀನ್."

(ನನ್ನ ಮುಖವು ಅದನ್ನು ಸೃಷ್ಟಿಸಿದ, ಅದಕ್ಕೆ ರೂಪು ಕೊಟ್ಟ, ಅದರ ಕಿವಿಗಳನ್ನು ಮಾಡಿದ, ಕಣ್ಣುಗಳನ್ನಿಟ್ಟ ಆ ಪಾವನ ಅಸ್ತಿತ್ವದ ಮುಂದೆ ಸುಜೂದ್ ಮಾಡುತ್ತದೆ. ಇದೆಲ್ಲವೂ ಅವನ ಅನುಗ್ರಹ ಮತ್ತು ಶಕ್ತಿಯಿಂದಾಗಿದೆ. ಅಲ್ಲಾಹನ ಅಸ್ತಿತ್ವವು ಪರಮ ಪಾವನವಾಗಿದೆ. ಅವನು ಅತ್ಯುತ್ತಮ ಸೃಷ್ಟಿಕರ್ತನಾಗಿರುವನು.)

ಇದಲ್ಲದೆ ಇತರ ನಮಾಝ್‌ಗಳಲ್ಲಿ ಹೇಳುವಂತೆ **"ಸುಬ್‌ಹಾನ ರಬ್ಬಿಯಲ್ ಅಅ್‌ಲಾ"** ಎಂದೂ ಹೇಳಬಹುದು.

ತಿಲಾವತ್‌ನ ಸುಜೂದ್‌ನ ಸ್ಥಳಗಳು ಈ ಕೆಳಗಿನಂತಿವೆ:

ಅಧ್ಯಾಯ	ಸೂಕ್ತ	ಅಧ್ಯಾಯ	ಸೂಕ್ತ
ಅಲ್ ಅಅ್‌ರಾಫ್	206	ಅರ್ರಅ್‌ದ್	15
ಅನ್ನಹ್ಲ್	50	ಬನೀ ಇಸ್ರಾಯೀಲ್	109
ಮರ್ಯಮ್	58	ಅಲ್ ಹಜ್ಜ್	18
ಅಲ್ ಹಜ್ಜ್	77	ಅಲ್ ಫುರ್ಕಾನ್	60
ಅನ್ನಮ್ಲ್	26	ಅಸ್ಸಜ್‌ದಃ	15
ಸ್ವಾದ್	24	ಹಾಮ್ಮೀಮ್ ಅಸ್ಸಜ್ದಃ	38
ಅನ್ನಜ್ಮ್	62	ಅಲ್ ಇನ್‌ಶಿಕಾಕ್	21
ಅಲ್ ಅಲಕ್	19		

ಜುಮ್‌ಆ ನಮಾಝ್

ಜುಮ್‌ಆ ನಮಾಝ್ ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಾಗಿದೆ. ಅದು ಎರಡು ರಕಅತ್ ನಿರ್ವಹಿಸುವುದಾಗಿದೆ. ಆದರೆ ಸ್ತ್ರೀಯರು, ಚಿಕ್ಕ ಮಕ್ಕಳು, ಜೀತದಾಳುಗಳು ಮತ್ತು ರೋಗಿಗಳ ಮೇಲೆ ಅದು ಕಡ್ಡಾಯವಲ್ಲ. ಜುಮ್‌ಆ ನಮಾಝ್‌ನ ಸಮಯವು ಝುಹರ್ ನಮಾಝ್‌ನ ಸಮಯವೇ ಆಗಿದೆ.

ಕನಿಷ್ಠ ನಲ್ವತ್ತು ಮಂದಿಯಾದರೂ ಒಂದು ಪ್ರದೇಶದಲ್ಲಿದ್ದರೆ ಅಲ್ಲಿ ಜುಮ್‌ಆ ನಮಾಝ್ ಕಡ್ಡಾಯವಾಗಿದೆ. ಜುಮ್‌ಆ ನಮಾಝ್ ಸಾಮೂಹಿಕವಾಗಿ ನಿರ್ವಹಿಸಬೇಕಾದುದು ಒಂದು ನಿಬಂಧನೆಯಾಗಿದೆ.

ಜುಮ್‌ಆ ನಮಾಝ್‌ಗೆ ಎರಡು ಅದಾನ್ ಕೊಡಲಾಗುವುದು. ಜುಮ್‌ಆ ನಮಾಝ್‌ಗಿಂತ ಮುಂಚೆ ಇಮಾಮರು ಎರಡು ಖುತ್ಬಾ(ಪ್ರವಚನ)ಗಳನ್ನು ಮಾಡುವುದು ಕಡ್ಡಾಯ.

ಖುತ್ಬಾದ ನಿಬಂಧನೆಗಳು

1. ಅಲ್ಲಾಹನ ಪ್ರಶಂಸೆ ಅಂದರೆ **'ಅಲ್‌ಹಮ್ದುಲಿಲ್ಲಾಹ್'** ಎಂದು ಹೇಳುವುದು.

2. ಪ್ರವಾದಿಯವರ(ಸ) ಮೇಲೆ ಸಲಾತ್ ಹೇಳುವುದು.

3. ತಕ್ವಾ ಅಥವಾ ದೇವಭಯವಿರಿಸಿಕೊಳ್ಳುವಂತೆ ಸಭಿಕರಿಗೆ ಉಪದೇಶಿಸುವುದು.

4. ಪ್ರಥಮ ಅಥವಾ ದ್ವಿತೀಯ ಖುತ್ಬಾದಲ್ಲಿ ಒಂದು ಆಯತ್ (ಕುರ್‌ಆನ್ ಸೂಕ್ತ) ಪಠಿಸುವುದು.

5. ದ್ವಿತೀಯ ಖುತ್ಬಾದಲ್ಲಿ ಮುಸ್ಲಿಮರಿಗಾಗಿ ಪ್ರಾರ್ಥಿಸುವುದು.

ಜುಮ್‌ಆ ಖುತ್ಬಾವನ್ನು ಮಿಂಬರ್ (ವೇದಿಕೆ) ಅಥವಾ ಎತ್ತರದಲ್ಲಿ ನಿಂತು ಮಾಡುವುದು ಮತ್ತು ಎರಡು ಖುತ್ಬಾಗಳ ಮಧ್ಯೆ ಸ್ವಲ್ಪ ಹೊತ್ತು ಕುಳಿತುಕೊಳ್ಳುವುದು ಸುನ್ನತ್ ಆಗಿದೆ.

ಜುಮ್‌ಆ ಖುತ್ಬಾ ಸಂಕ್ಷಿಪ್ತವೂ ಸಾರಪೂರ್ಣವೂ ಆಗಿರಬೇಕು. ಜುಮ್‌ಆ ಖುತ್ಬಾವನ್ನು ಪ್ರಾದೇಶಿಕ ಭಾಷೆಯಲ್ಲೂ ಮಾಡಬಹುದು. ಖುತ್ಬಾ ನಡೆಯುತ್ತಿರುವಾಗ ಸಭಿಕರು ಮೌನವಾಗಿ ಆಲಿಸಬೇಕು. ಯಾವುದೇ ರೀತಿಯ ಮಾತುಕತೆ ನಿಷಿದ್ಧ. ಮಾತುಕತೆ ನಡೆಸಿದರೆ ಅವನಿಗೆ ಜುಮ್‌ಆದ ಪುಣ್ಯವೇ ಲಭಿಸದು.

ಖುತ್ಬಾ ನಡೆಯುತ್ತಿರುವಾಗ ಮೊದಲು ಬಂದವರು ಮೊದಲ ಸಾಲಿನಲ್ಲೂ ನಂತರ ಬಂದವರು ಕ್ರಮವಾಗಿ ಹಿಂದಿನ ಸಾಲುಗಳಲ್ಲೂ ಕುಳಿತುಕೊಳ್ಳಬೇಕು. ಜನರ ಹೆಗಲ ಮೇಲಿಂದ ದಾಟುತ್ತಾ ಸಾಗುವುದು ಸರಿಯಲ್ಲ. ಖುತ್ಬಾ ಕೇಳಲಿಕ್ಕಾಗಿ ಆದಷ್ಟು

ಬೇಗ ಮಸೀದಿಗೆ ಬಂದು ಸೇರಬೇಕು.

ಖುತ್ಬಾ ನಡೆಯುತ್ತಿರುವಾಗ, ಮೊಣಕಾಲು ಹೊಟ್ಟೆಗೆ ತಾಗಿಸಿಕೊಂಡು ಕುಳಿತು ಕೊಳ್ಳಬಾರದು.

ಖುತ್ಬಾ ನಡೆಯುತ್ತಿರುವಾಗ, ಯಾರಾದರೂ ತನ್ನ ಅಗತ್ಯಕ್ಕಾಗಿ ಎದ್ದರೆ ಅವನ ಸ್ಥಳದಲ್ಲಿ ಬೇರೆ ಯಾರೂ ಕುಳಿತುಕೊಳ್ಳಬಾರದು. ಅವನೇ ಮರಳಿ ಬಂದು ಅಲ್ಲಿ ಕುಳಿತುಕೊಳ್ಳಲು ಅವಕಾಶ ಮಾಡಿ ಕೊಡಬೇಕು. ಅದೇ ರೀತಿ ಯಾರನ್ನಾದರೂ ಕುಳಿತಲ್ಲಿಂದ ಎಬ್ಬಿಸಿ ಆ ಸ್ಥಳದಲ್ಲಿ ಕುಳಿತುಕೊಳ್ಳಬಾರದು.

ಖುತ್ಬಾ ಮುಗಿದ ಕೂಡಲೇ ಇಕಾಮತ್ ಹೇಳಿ ಜುಮ್‌ಆ ನಮಾಝ್ ನಿರ್ವಹಿಸಬೇಕು. ಜುಮ್‌ಆ ನಮಾಝನ್ನು ಝುಹರ್ ನಮಾಝ್‌ನಂತೆ ಮೆಲುದನಿಯಲ್ಲಿ ನಿರ್ವಹಿಸುವುದಲ್ಲ. ಅದರ ಎರಡೂ ರಕಅತ್‌ಗಳಲ್ಲಿ ಇಮಾಮರು 'ಸೂರಃ ಫಾತಿಹಾ' ಮತ್ತು ಕುರ್‌ಆನಿನ ಯಾವುದಾದರೂ ಅಧ್ಯಾಯವನ್ನು ಮಧ್ಯಮ ಸ್ವರದಲ್ಲಿ ಪಠಿಸಬೇಕು.

ಜುಮ್‌ಆ ನಮಾಝ್ ನಡೆಯುತ್ತಿರುವಾಗ ಒಬ್ಬನು ನಮಾಝ್‌ನ ಎರಡನೆಯ ರುಕೂಅ್‌ನಲ್ಲಿ ಸೇರಿದರೆ ನಮಾಝ್ ಮುಗಿದ ನಂತರ ಅವನು ಇನ್ನೊಂದು ರಕಅತ್ ನಿರ್ವಹಿಸಬೇಕು. ಅವನಿಗೆ ಜುಮಾ ನಮಾಝ್ ದೊರೆತಂತಾಯಿತು. ಆದರೆ ಎರಡನೆಯ ರಕಅತ್‌ನ ರುಕೂಅ್‌ನಿಂದ ಇಮಾಮರು ತಲೆಯೆತ್ತಿದ ನಂತರ ಬಂದು ಸೇರಿದರೆ ಇಮಾಮರು ನಮಾಝ್ ಮುಗಿಸಿದ ನಂತರ ಅವನು ನಾಲ್ಕು ರಕಅತ್ ನಿರ್ವಹಿಸಬೇಕು. ಅವನ ನಮಾಝ್, ಝುಹರ್ ನಮಾಝ್ ಎಂದು ಪರಿಗಣಿಸಲ್ಪಡುವುದು.

ಜುಮ್‌ಆ ನಮಾಝ್‌ಗೆ ಹೋಗುವವರು ಸ್ನಾನ ಮಾಡಿ ಉತ್ತಮ ಉಡುಪು ಧರಿಸಿಕೊಳ್ಳಬೇಕು. ಸುಗಂಧ ದ್ರವ್ಯವನ್ನು ಪೂಸಿಕೊಳ್ಳುವುದು ಉತ್ತಮ.

ಮಯ್ಯಿತ್ ನಮಾಝ್

ಮಯ್ಯಿತ್ ನಮಾಝ್ 'ಫರ್ಝ್ ಕಿಫಾಯಃ' ಆಗಿದೆ. ಅರ್ಥಾತ್ ಒಂದು ಪ್ರದೇಶದಲ್ಲಿ ಒಬ್ಬನು ಮರಣ ಹೊಂದಿದರೆ ಅವನ ಪಾಪ ವಿಮೋಚನೆಗಾಗಿ ಎಲ್ಲ ಮುಸ್ಲಿಮರು ಮಯ್ಯಿತ್ ನಮಾಝ್ ಮಾಡದಿದ್ದರೂ, ಕೆಲವು ಮಂದಿ ಮಾಡಿದರೆ ಎಲ್ಲರ ಪರವಾಗಿ ಫರ್ಝ್ ನೆರವೇರಿಸಿದಂತಾಗುತ್ತದೆ. ಆದರೆ ಒಬ್ಬರಾದರೂ ನಮಾಝ್ ಮಾಡದಿದ್ದರೆ ಎಲ್ಲರ ಮೇಲೆ ಪಾಪಭಾರವಿರುವುದು. ಇದಕ್ಕೆ ವ್ಯತಿರಿಕ್ತವಾಗಿ ದಿನದ ಐದು ಹೊತ್ತಿನ ನಮಾಝ್ ಪ್ರತಿಯೊಬ್ಬನ ಮೇಲೂ ಕಡ್ಡಾಯವಾಗಿದೆ. ಅವನ್ನು ತೊರೆಯುವುದರ ಪಾಪ ಪ್ರತಿಯೊಬ್ಬನ ಮೇಲೂ ಇದೆ.

ಒಬ್ಬನು ಮರಣ ಹೊಂದಿದರೆ ಮೊದಲು ಅವನನ್ನು ಸ್ನಾನ ಮಾಡಿಸಬೇಕು. ಅನಂತರ ಕಫನ್ ತೊಡಿಸಬೇಕು. ಅನಂತರ ಜನಾಝಾ(ಮೃತದೇಹ)ವನ್ನು ಎತ್ತಿಕೊಂಡು ಹೋಗಿ ಮಸೀದಿಯಲ್ಲಿಟ್ಟು ಮಯ್ಯಿತ್ ನಮಾಝ್ ಸಾಮೂಹಿಕವಾಗಿ ನಿರ್ವಹಿಸಬೇಕು. ಅನಂತರ ಮುಸ್ಲಿಮರ ಕಬರಸ್ಥಾನದಲ್ಲಿ ದಫನ ಮಾಡಬೇಕು.

ಮಯ್ಯಿತ್ ನಮಾಝ್‌ನಲ್ಲಿ ಪಾಲಿಸಲೇ ಬೇಕಾದ ವಿಷಯಗಳು ಹೀಗಿವೆ:

1. ನಿಯ್ಯತ್ (ಸಂಕಲ್ಪ).
2. ನಿಲ್ಲುವುದು.
3. ನಾಲ್ಕು ತಕ್ಬೀರ್‌ಗಳು.
4. ಸೂರಃ ಫಾಹಾ.
5. ಸಲಾತ್ ಹೇಳುವುದು.
6. ಮಯ್ಯಿತ್‌ಗಾಗಿ ಪ್ರಾರ್ಥನೆ.
7. ಸಲಾಮ್.

ಮಯ್ಯಿತ್ ನಮಾಝ್‌ನ ವಿಧಾನ

ಮಯ್ಯಿತ್ತನ್ನು ಮುಂದಿಟ್ಟು ಓರ್ವ ಇಮಾಮನ ಹಿಂದೆ ಮೂರು, ಐದು, ಏಳು ಬೆಸ ಸಂಖ್ಯೆಯ ಸಾಲುಗಳಲ್ಲಿ ಜನರು ನಿಲ್ಲಬೇಕು. ಇಮಾಮ್ **'ಅಲ್ಲಾಹು ಅಕ್ಬರ್'** ಎಂದು ಹೇಳಿ ಕೈ ಕಟ್ಟಿದ ಕೂಡಲೇ ಎಲ್ಲರೂ ಕೈ ಕಟ್ಟಿ ನಿಲ್ಲಬೇಕು. ಕೈ ಕಟ್ಟುವಾಗ ಈ ಮಯ್ಯಿತ್‌ನ ಬಗ್ಗೆ ನಮಾಝ್ ನಿರ್ವಹಿಸುತ್ತಿರುವೆನೆಂದು ನಿಯ್ಯತ್ ಮಾಡಬೇಕು.

ಅನಂತರ ಮೆಲುದನಿಯಲ್ಲಿ 'ಸೂರಃ ಫಾತಿಹಾ' ಓದಬೇಕು. ಅನಂತರ **'ಅಲ್ಲಾಹು ಅಕ್ಬರ್'** ಎನ್ನುತ್ತಾ ನಿಂತುಕೊಂಡೇ ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ಸಲಾತ್ ಹೇಳಬೇಕು. ಅದು ಸಾಮಾನ್ಯವಾಗಿ ಇತರ ನಮಾಝ್‌ಗಳಲ್ಲಿ ಹೇಳುವ ಸಲಾತೇ ಆಗಿದೆ.

ಅನಂತರ ಪುನಃ **'ಅಲ್ಲಾಹು ಅಕ್ಬರ್'** ಎನ್ನುತ್ತಾ, ಮಯ್ಯಿತ್‌ಗಾಗಿ ಪ್ರಾರ್ಥಿಸಬೇಕು. ಈ ಕೆಳಗಿನವುಗಳ ಪೈಕಿ ಯಾವ ಪ್ರಾರ್ಥನೆಯನ್ನೂ ಮಾಡಬಹುದು–

اَللّٰهُمَّ اغْفِرْ لَهُ وَارْحَمْهُ وَاعْفُ عَنْهُ وَعَافِهِ، وَاَكْرِمْ نُزْلَهُ ،
وَوَسِّعْ مَدْخَلَهُ وَاغْسِلْهُ بِالْمَاءِ وَالثَّلْجِ وَالْبَرْدِ ، وَنَقِّهِ مِنَ الْخَطَايَا كَمَا
يُنَقَّى الثَّوْبُ الْاَبْيَضُ مِنَ الدَّنَسِ وَاَبْدِلْهُ دَارًا خَيْرًا مِّنْ دَارِهِ وَاَهْلاً خَيْرًا
مِّنْ اَهْلِهِ وَزَوْجًا خَيْرًا مِّنْ زَوْجِهِ وَاَدْخِلْهُ الْجَنَّةَ وَاَعِذْهُ مِنْ عَذَابِ الْقَبْرِ
وَمِنْ عَذَابِ النَّارِ

1. “ಅಲ್ಲಾಹುಮ್ಮಗ್‌ಫಿರ್‌ಲಹು ವರ್‌ಹಮ್‌ಹು ವಅ್‌ಫು ಅನ್‌ಹು ವ ಆಫಿಹೀ ವ ಅಕ್‌ರಿಮ್ ನುಝುಲಹು ವವಸ್ಸಿಅ್ ಮದ್‌ಖಲಹು ವಗ್‌ಸಿಲ್‌ಹು ಬಿಲ್ ಮಾಇ ವಸ್ಸಲ್‌ಜಿ ವಲ್ ಬರದಿ ವನಕ್ಕಿಹಿ ಮಿನಲ್ ಖತಾಯ ಕಮಾ ನಕ್ಕೈತ ಸ್ಸೌಬುಲ್ ಅಬ್‌ಯದು ಮಿನದ್ದನಸಿ ವಬ್ದಿಲ್‌ಹುದಾರನ್ ಖೈರಮ್ಮಿನ್‌ದಾರಿಹಿ ವಅಹ್ಲನ್ ಖೈರಮ್ಮಿನ್ ಅಹ್ಲಿಹೀ ವಝೌಜನ್ ಖೈರಮ್ಮಿನ್ ಝೌಜಿಹಿ ವಅದ್‌ಖಿಲ್‌ಹುಲ್ ಜನ್ನತ ವಅಇದ್‌ಹು ಮಿನ್ ಅದಾಬಿಲ್ ಕಬ್‌ರಿ ವಮಿನ್ ಅದಾಬಿನ್ನಾರಿ.”

[ಅಲ್ಲಾಹನೇ ಇವನಿಗೆ (ಈ ಮೃತನಿಗೆ) ಕ್ಷಮೆ ನೀಡು. ಇವನ ಮೇಲೆ ಕರುಣೆ ತೋರು, ಇವನ ಪಾಪಗಳನ್ನು ನೀನು ಕಡೆಗಣಿಸು, ಇವನಿಗೆ ನೀನು ಸುಖ ನೀಡು. ಇವನನ್ನು ನೀನು ಗೌರವಪೂರ್ಣವಾಗಿ ಸತ್ಕರಿಸು, ಇವನು ಪ್ರವೇಶಿಸುವ ಸ್ಥಳವನ್ನು ವಿಶಾಲಗೊಳಿಸು. ನೀರಿನಿಂದಲೂ ಮಂಜಿನಿಂದಲೂ ಆಲಿಕಲ್ಲು ನೀರಿನಿಂದಲೂ ಇವನನ್ನು ಶುದ್ಧೀಕರಿಸು. ಇವನ ತಪ್ಪುಗಳನ್ನು ತೊಳೆದು ಶುದ್ಧೀಕರಿಸು. ಕೊಳೆಯಿಂದ ಬಿಳಿ ವಸ್ತ್ರವನ್ನು ಶುದ್ಧೀಕರಿಸುವಂತೆ! ಇವನಿಗೆ ಇವನ (ಇಹಲೋಕದ) ಮನೆಗಿಂತಲೂ ಉತ್ತಮವಾದ ಒಂದು ಮನೆಯನ್ನೂ ಇವನ (ಇಹಲೋಕದ) ಕುಟುಂಬಕ್ಕಿಂತ ಉತ್ತಮ ಕುಟುಂಬವನ್ನೂ ಇಹಲೋಕದ ಸಂಗಾತಿಗಿಂತ ಉತ್ತಮ ಸಂಗಾತಿಯನ್ನೂ ದಯಪಾಲಿಸು. ನೀನು ಇವನನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸು. ಗೋರಿಯ ಯಾತನೆಯಿಂದಲೂ ನರಕದ ಯಾತನೆಯಿಂದಲೂ ಇವನನ್ನು ರಕ್ಷಿಸು.]

اَللّٰهُمَّ اغْفِرْ لِحَيِّنَا وَمَيِّتِنَا وَصَغِيْرِنَا وَكَبِيْرِنَا، وَذَكَرِنَا وَاُنْثَانَا وَشَاهِدِنَا وَغَائِبِنَا اَللّٰهُمَّ مَنْ اَحْيَيْتَهُ مِنَّا فَاَحْيِهِ عَلَى الْاِسْلَامِ وَمَنْ تَوَفَّيْتَهُ مِنَّا فَتَوَفَّهُ عَلَى الْاِيْمَانِ۔

2. “ಅಲ್ಲಾಹುಮ್ಮಗ್‌ಫಿರ್ ಲಿಹಯ್ಯಿನಾ ವ ಮಯ್ಯಿತಿನಾ ವ ಸಗೀರಿನಾ ವ ಕಬೀರಿನಾ ವ ದಕರಿನಾ ವ ಉನ್‌ಸಾನಾ ವಶಾಹಿದಿನಾ ವ ಗಾಇಬಿನಾ ಅಲ್ಲಾಹುಮ್ಮ ಮನ್ ಅಹ್‌ಯಯ್‌ತಹು ಮಿನ್ನಾ ಫಅಹ್‌ಯಿಹೀ ಅಲಲ್ ಇಸ್ಲಾಮಿ, ವಮನ್ ತವಫ್ಫೈತಹು ಮಿನ್ನಾ ಫತವಫ್ಫಹು ಅಲಲ್ ಈಮಾನ್.”

[ಓ ಅಲ್ಲಾಹ್! ನಮ್ಮ ಜೀವಂತರನ್ನು, ನಮ್ಮ ಮೃತರನ್ನು, ನಮ್ಮ ಕಿರಿಯರನ್ನು, ನಮ್ಮ ಹಿರಿಯರನ್ನು, ನಮ್ಮ ಪುರುಷರನ್ನು, ನಮ್ಮ ಸ್ತ್ರೀಯರನ್ನು, ನಮ್ಮ ಉಪಸ್ಥಿತರನ್ನು, ನಮ್ಮ ಅನುಪಸ್ಥಿತರನ್ನು ಕ್ಷಮಿಸು. ಓ ಅಲ್ಲಾಹ್! ನಮ್ಮ ಪೈಕಿ ಯಾರನ್ನು ನೀನು ಬದುಕಿಸಿದರೂ ಇಸ್ಲಾಮಿನಂತೆ ಬದುಕಿಸು. ನಮ್ಮ ಪೈಕಿ ಯಾರನ್ನು ನೀನು ಸಾಯಿಸಿದರೂ ಈಮಾನ್ (ಸತ್ಯ ವಿಶ್ವಾಸ) ಸಹಿತ ಸಾಯಿಸು.]

ಈ ಪ್ರಾರ್ಥನೆಯ ಬಳಿಕ ನಾಲ್ಕನೆಯ ತಕ್‌ಬೀರ್ ಹೇಳಿ, ಸಲಾಮ್ ಹೇಳುವುದಕ್ಕಿಂತ ಮುಂಚೆ ಈ ಕೆಳಗಿನ ಪ್ರಾರ್ಥನೆ ಮಾಡುವುದು ಸುನ್ನತ್ ಆಗಿದೆ–

اَللّٰهُمَّ لَا تُحَرِّمْنَا أَجْرَهُ وَلَا تَفْتِنَّا بَعْدَهُ وَاغْفِرْ لَنَا وَلَهُ

"ಅಲ್ಲಾಹುಮ್ಮ ಲಾ ತುಹರ್‍ರಿಮ್‌ನಾ ಅಜ್ರಹೂ ವಲಾ ತಫ್ತಿನ್ನಾ ಬಅ್‌ದಹೂ ವಗ್‌ಫಿರ್‌ಲನಾ ವಲಹೂ."

(ಅಲ್ಲಾಹನೇ! ಇವನಿಗೆ ದೊರಕುವ ಪ್ರತಿಫಲದಿಂದ ನಮ್ಮನ್ನು ವಂಚಿತಗೊಳಿಸ ಬೇಡ ಮತ್ತು ಇವನ ನಂತರ ನಮ್ಮನ್ನು ಪರೀಕ್ಷೆಗೊಳಪಡಿಸಬೇಡ. ಇವನನ್ನೂ ನಮ್ಮನ್ನೂ ನೀನು ಕ್ಷಮಿಸು.)

ಅನಂತರ اَلسَّلَامُ عَلَيْكُمْ وَرَحْمَةُ اللّٰهِ وَبَرَكَاتُهُ **"ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹೂ"** ಎನ್ನುತ್ತಾ ಬಲ ಮತ್ತು ಎಡಗಡೆಗೆ ಮುಖ ತಿರುಗಿಸಬೇಕು.

ಮಯ್ಯಿತ್ ನಮಾಝ್‌ನಲ್ಲಿ ರುಕೂಅ್ ಮತ್ತು ಸುಜೂದ್‌ಗಳಿಲ್ಲ. ಪ್ರತಿಯೊಂದು ತಕ್‌ಬೀರ್ ಹೇಳುವಾಗ ಇತರ ನಮಾಝ್‌ಗಳಲ್ಲಿ ಎತ್ತುವಂತೆ ಎರಡೂ ಕೈಗಳನ್ನು ಭುಜಗಳ ವರೆಗೆ ಎತ್ತಿ ಪುನಃ ಕಟ್ಟಬೇಕು.

ಗಂಡಸರ ಮಯ್ಯಿತ್ ಆದರೆ ಇಮಾಮರು ನಮಾಝ್‌ನ ವೇಳೆ ಮಯ್ಯಿತ್‌ನ ತಲೆಯ ಹತ್ತಿರವೂ ಹೆಂಗಸರ ಮಯ್ಯಿತ್ ಆದರೆ ಸೊಂಟದ ಹತ್ತಿರವೂ ನಿಲ್ಲಬೇಕು.

ಮಯ್ಯಿತ್ ನಮಾಝ್ ಮುಗಿದ ಬಳಿಕ ಯಾವ ಪ್ರಾರ್ಥನೆಯೂ ಇಲ್ಲ.

❖ ❖ ❖ ❖

ಸೂರಃ ಅಲ್ ಫಾತಿಹಾ

بِسْمِ اللَّهِ الرَّحْمَٰنِ الرَّحِيمِ ﴿١﴾
الْحَمْدُ لِلَّهِ رَبِّ الْعَالَمِينَ ﴿٢﴾
الرَّحْمَٰنِ الرَّحِيمِ ﴿٣﴾ مَالِكِ يَوْمِ الدِّينِ ﴿٤﴾
إِيَّاكَ نَعْبُدُ وَإِيَّاكَ نَسْتَعِينُ ﴿٥﴾ اهْدِنَا
الصِّرَاطَ الْمُسْتَقِيمَ ﴿٦﴾ صِرَاطَ الَّذِينَ أَنْعَمْتَ
عَلَيْهِمْ غَيْرِ الْمَغْضُوبِ عَلَيْهِمْ
وَلَا الضَّالِّينَ ﴿٧﴾

"ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್. ಅಲ್‌ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್. ಅರ್ರಹ್ಮಾನಿರ್ರಹೀಮ್. ಮಾಲಿಕಿ ಯೌಮಿದ್ದೀನ್. ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್‌ತಈನ್. ಇಹ್‌ದಿನಸ್ಸಿರಾತಲ್ ಮುಸ್ತಕೀಮ್. ಸಿರಾತಲ್ಲದೀನ ಅನ್‌ಅಮ್‌ತ ಅಲೈಹಿಮ್ ಗೈರಿಲ್ ಮಗ್‌ದೂಬಿ ಅಲೈಹಿಮ್ ವಲದ್ದಾಲ್ಲೀನ್."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಅಲ್ಲಾಹನಿಗೇ ಸರ್ವಸ್ತುತಿ ಅವನು ಸಕಲ ವಿಶ್ವದ ಪ್ರಭು. ಪರಮ ದಯಾಳು, ಕರುಣಾನಿಧಿ, ನಿರ್ಣಾಯಕ ದಿನದ ಅಧಿಪತಿ (ಆದ ಪ್ರಭುವೇ)– ನಾವು ನಿನಗೆ ಮಾತ್ರ ಇಬಾದತ್ ಮಾಡುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ. ನಮ್ಮನ್ನು 'ಸನ್ಮಾರ್ಗ'ದಲ್ಲಿ ಮುನ್ನಡೆಸು. ನೀನು ಅನುಗ್ರಹಿಸಿದವರ ಮಾರ್ಗ. ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ. (ನೀನು ತೋರಿದ) ದಾರಿಯನ್ನು ತಪ್ಪಿ ನಡೆದವರ ಮಾರ್ಗವೂ ಅಲ್ಲ.

ಸೂರಃ ಅಲ್ ಅಸ್ರ್

بِسْمِ اللّٰهِ الرَّحْمٰنِ الرَّحِيْمِ ○

وَالْعَصْرِ ① اِنَّ الْاِنْسَانَ لَفِیْ خُسْرٍ ② اِلَّا الَّذِیْنَ اٰمَنُوْا وَعَمِلُوا

الصّٰلِحٰتِ وَتَوَاصَوْا بِالْحَقِّ ۙ وَتَوَاصَوْا بِالصَّبْرِ ③

ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್

"ವಲ್‌ಅಸ್ರ್, ಇನ್ನಲ್ ಇನ್ಸಾನ ಲಫೀಖುಸ್ರ್, ಇಲ್ಲಲ್ಲದೀನ ಆಮನೂ ವ ಅಮಿಲುಸ್ವಾಲಿಹಾತಿ ವತವಾಸವ್ ಬಿಲ್ ಹಕ್ಕಿ ವತವಾಸವ್ ಬಿಸ್ಸಬ್ರ್."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಕಾಲದಾಣೆ, ನಿಜವಾಗಿ ಮನುಷ್ಯನು ಮಹಾ ನಷ್ಟದಲ್ಲಿದ್ದಾನೆ– ಸತ್ಯವಿಶ್ವಾಸ ಸ್ವೀಕರಿಸಿದ, ಸತ್ಕರ್ಮ ಮಾಡುತ್ತಿದ್ದ ಮತ್ತು ಪರಸ್ಪರ ಸತ್ಯ ಹಾಗೂ ಸಹನೆಯನ್ನು ಉಪದೇಶಿಸುತ್ತಿದ್ದವರ ಹೊರತು.

ಸೂರಃ ಅಲ್ ಕಾಫಿರೂನ್

بِسْمِ اللّٰهِ الرَّحْمٰنِ الرَّحِيْمِ ○

قُلْ يٰۤاَيُّهَا الْكٰفِرُوْنَ ① لَاۤ اَعْبُدُ مَا تَعْبُدُوْنَ ② وَلَاۤ اَنْتُمْ

عٰبِدُوْنَ مَاۤ اَعْبُدُ ③ وَلَاۤ اَنَا عَابِدٌ مَّا عَبَدْتُّمْ ④ وَلَاۤ اَنْتُمْ عٰبِدُ

وْنَ مَاۤ اَعْبُدُ ⑤ لَكُمْ دِيْنُكُمْ وَلِیَ دِيْنِ ⑥

ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್

"ಕುಲ್ ಯಾ ಅಯ್ಯುಹಲ್ ಕಾಫಿರೂನ್. ಲಾ ಅಅ್‌ಬುದು ಮಾ ತಅ್‌ಬುದೂನ್. ವಲಾ ಅಂತುಮ್ ಆಬಿದೂನ ಮಾ ಅಅ್‌ಬುದ್. ವಲಾ ಅನ ಆಬಿದುಂಮ್ಮಾ

ಅಬತ್ತುಮ್. ವಲಾ ಅಂತುಮ್ ಆಬಿದೂನ ಮಾ ಅಅ್‌ಬುದ್. ಲಕುಮ್ ದೀನುಕುಮ್ ವಲಿಯದೀನ್."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಹೇಳಿರಿ! ಓ, ಸತ್ಯನಿಷೇಧಿಗಳೇ, ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ- ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನೂ ಮಾಡುವವನಲ್ಲ- ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ.

ಸೂರಃ ಅನ್ನಸ್ರ್

بِسْمِ اللّٰهِ الرَّحْمٰنِ الرَّحِيْمِ

إِذَا جَآءَ نَصْرُ اللّٰهِ وَالْفَتْحُ ① وَرَاَيْتَ النَّاسَ يَدْخُلُوْنَ فِيْ دِيْنِ اللّٰهِ اَفْوَاجًا ② فَسَبِّحْ بِحَمْدِ رَبِّكَ وَاسْتَغْفِرْهُ ۚ إِنَّهٗ كَانَ تَوَّابًا ③

ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್

"ಇದಾ ಜಾಅ ನಸ್ರುಲ್ಲಾಹಿ ವಲ್‌ಫತ್‌ಹ್. ವರಅಯ್‌ತನ್ನಾಸ ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್‌ವಾಜಾ. ಫಸಬ್ಬಿಹ್ ಬಿಹಮ್ದಿರಬ್ಬಿಕ ವಸ್ತಗ್‌ಫಿರ್‌ಹು ಇನ್ನಹು ಕಾನ ತವ್ವಾಬಾ."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಅಲ್ಲಾಹನ ಸಹಾಯ ಬಂದು ಬಿಟ್ಟಾಗ ಮತ್ತು ವಿಜಯ ಪ್ರಾಪ್ತವಾದಾಗ ಮತ್ತು (ಸಂದೇಶವಾಹಕರೇ) ಜನರು ತಂಡೋಪತಂಡವಾಗಿ ಅಲ್ಲಾಹನ ಧರ್ಮವಲ್ಲಿ ಪ್ರವೇಶಿಸುತ್ತಿರುವುದನ್ನು ನೀವು ಕಂಡಾಗ ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನ ಕೀರ್ತನೆ ಮಾಡಿರಿ ಮತ್ತು ಅವನೊಡನೆ ಕ್ಷಮೆ ಯಾಚಿಸಿರಿ. ನಿಸ್ಸಂದೇಹವಾಗಿಯೂ ಅವನು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನಾಗಿರುತ್ತಾನೆ.

ಸೂರಃ ಅಲ್ ಇಖ್‌ಲಾಸ್

بِسْمِ اللّٰهِ الرَّحْمٰنِ الرَّحِيْمِ○

قُلْ هُوَ اللّٰهُ اَحَدٌ ۝١ اَللّٰهُ الصَّمَدُ ۝٢ لَمْ يَلِدْ ۙ وَلَمْ يُوْلَدْ ۝٣ وَلَمْ
يَكُنْ لَّهٗ كُفُوًا اَحَدٌ ۝٤

ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್

"ಕುಲ್ ಹುವಲ್ಲಾಹು ಅಹದ್. ಅಲ್ಲಾಹುಸ್ಸಮದ್. ಲಮ್ ಯಲಿದ್ ವಲಮ್ ಯೂಲದ್. ವಲಮ್ ಯಕುಲ್ಲಹೂ ಕುಫುವನ್ ಅಹದ್."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಹೇಳಿರಿ– ಅವನು ಅಲ್ಲಾಹನು ಏಕೈಕನು. ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ.

ಸೂರಃ ಅಲ್ ಫಲಕ್

بِسْمِ اللّٰهِ الرَّحْمٰنِ الرَّحِيْمِ○

قُلْ اَعُوْذُ بِرَبِّ الْفَلَقِ ۝١ مِنْ شَرِّ مَا خَلَقَ ۝٢ وَمِنْ شَرِّ
غَاسِقٍ اِذَا وَقَبَ ۝٣ وَمِنْ شَرِّ النَّفّٰثٰتِ فِى الْعُقَدِ ۝٤ وَمِنْ شَرِّ
حَاسِدٍ اِذَا حَسَدَ ۝٥

ಬಿಸ್ಮಿಲ್ಲಾಹಿರ್ರಹ್‌ಮಾನಿರ್ರಹೀಮ್

"ಕುಲ್ ಅಊದು ಬಿರಬ್ಬಿಲ್ ಫಲಕ್. ಮಿನ್ ಷರ್ರಿ ಮಾ ಖಲಕ್. ವಮಿನ್‌ಷರ್ರಿ

ಗಾಸಿಕಿನ್ ಇದಾ ವಕಬ್. ವಮಿನ್ ಷರ್ರಿನ್ನಫ್ಫಾಸಾತಿ ಫಿಲ್ ಉಕದ್. ವಮಿನ್ ಷರ್ರಿ ಹಾಸಿದಿನ್ ಇದಾ ಹಸದ್."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಹೇಳಿರಿ– ನಾನು ಮುಂಜಾವಿನ ಪ್ರಭುವಿನ ಅಭಯ ಯಾಚಿಸುತ್ತೇನೆ. ಅವನು (ಅಲ್ಲಾಹನು) ಸೃಷ್ಟಿಸಿದ ಸಕಲ ವಸ್ತುಗಳ ಕೇಡಿನಿಂದ. ಇರುಳಿನ ಅಂಧಕಾರವು ಕವಿದಾಗ ಉಂಟಾಗುವ ಕೇಡಿನಿಂದ, ಗಂಟುಗಳ ಮೇಲೆ ಊದುವವರ (ಅಥವಾ ಹಾಗೆ ಊದುವ ಸ್ತ್ರೀಯರ) ಕೇಡಿನಿಂದ ಮತ್ತು ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಭಯ ಯಾಚಿಸುತ್ತೇನೆ).

ಸೂರಃ ಅನ್ನಾಸ್

بِسْمِ اللّٰهِ الرَّحْمٰنِ الرَّحِيْمِ○

قُلْ اَعُوْذُ بِرَبِّ النَّاسِ ﴿١﴾ مَلِكِ النَّاسِ ﴿٢﴾ اِلٰهِ النَّاسِ ﴿٣﴾ مِنْ
شَرِّ الْوَسْوَاسِ ۙ الْخَنَّاسِ ﴿٤﴾ الَّذِىْ يُوَسْوِسُ فِىْ صُدُوْرِ النَّاسِ ﴿٥﴾
مِنَ الْجِنَّةِ وَالنَّاسِ ﴿٦﴾

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್

"ಕುಲ್ ಅಊದು ಬಿರಬ್ಬಿನ್ನಾಸ್. ಮಲಿಕಿನ್ನಾಸ್. ಇಲಾಹಿನ್ನಾಸ್. ಮಿನ್ ಷರ್ರಿಲ್ ವಸ್‌ವಾಸಿಲ್ ಖನ್ನಾಸ್. ಅಲ್ಲದೀ ಯುವಸ್‌ವಿಸು ಫೀ ಸುದೂರಿನ್ನಾಸ್. ಮಿನಲ್ ಜಿನ್ನತಿ ವನ್ನಾಸ್."

ಪರಮ ದಯಾಮಯನೂ ಕರುಣಾನಿಧಿಯೂ
ಆದ ಅಲ್ಲಾಹನ ನಾಮದಿಂದ

ಹೇಳಿರಿ– ನಾನು ಮಾನವರ ಪ್ರಭು, ಮಾನವರ ಸಾಮ್ರಾಟ, ಮಾನವರ ನೈಜ ಆರಾಧ್ಯನ ಅಭಯ ಯಾಚಿಸುತ್ತೇನೆ. ಪದೇ ಪದೇ ಬಂದು ದುಷ್ಪ್ರೇರಣೆ ನೀಡುವವನ ಕೇಡಿನಿಂದ, ಜನರ ಮನಸ್ಸುಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನ ಕೇಡಿನಿಂದ. ಅವನು ಜಿನ್ನ್‌ಗಳ ಪೈಕಿಯಾಗಿರಲಿ– ಮಾನವರ ಪೈಕಿಯಾಗಿರಲಿ.